ಸಂಪಾದಕರು: ರವಿಕುಮಾರ್ ಸಿ.ಹೆಚ್.

ಓದುಗರ ನೆಚ್ಚಿನ ಕನ್ನಡ ದಿನಪತ್ರಿಕೆ

ಸೂರ್ಯ ಪ್ರಗತಿ

SURYAPRAGATHI Kannada Daily

ಪ್ರತಿ ಸುದ್ದಿಯ ಧ್ವನಿ

suryapragathi2021@gmail.com Mob: 9901010109 RNI:KARKAN/2021/80805 L2/RNP-1285/TMR/2025-27

Volume: 05 ಸಂಪುಟ: 05 | Issue:64 ಸಂಚಿಕೆ: 64 | Date: 19-03-2026 Thursday | RNI NO : KARKAN/2021/80805 | L2/RNP-1285/TMR/2025-27 | Page :4 ಪುಟ : 4 | Price: 1.00 ಬೆಲೆ: 1.00 ರೂ



ಪತ್ರಿಕಾ ಕಚೇರಿಗೆ ರಜೆ

ಸಮಸ್ತ ನಾಡಿನ ಜನತೆಗೆ ಹಾಗೂ ಸೂರ್ಯಪ್ರಗತಿ ದಿನಪತ್ರಿಕೆಯ ಸಮಸ್ತ ಓದುಗರಿಗೆ ಯುಗಾದಿ ಶುಭಾಶಯಗಳೊಂದಿಗೆ ಯುಗಾದಿ ಹಬ್ಬದ ಪ್ರಯುಕ್ತ ಗುರುವಾರ ಕಚೇರಿಗೆ ರಜೆ ಪ್ರಯುಕ್ತ ಶುಕ್ರವಾರ ಸಂಚಿಕೆ ಪ್ರಕಟವಾಗುವುದಿಲ್ಲ ಓದುಗರು ಸೂರ್ಯಪ್ರಗತಿ .ಕಾಂ ವೆಬ್ ನ್ಯೂಸ್ ನಲ್ಲಿ ನೋಡಬಹುದು

ಸುಸಜ್ಜಿತ ಜ್ಞಾನಸಿರಿ ಕ್ಯಾಂಪಸ್; ಸಹಕಾರಕ್ಕೆ ಕುಲಪತಿ ಶ್ಲಾಘನೆ



ತುಮಕೂರು: ನಗರ ಸಮೀಪ ಬಿದರೆಕಟ್ಟೆ ಬಳಿ ತುಮಕೂರು ವಿಶ್ವವಿದ್ಯಾಲಯದ ಜ್ಞಾನಸಿರಿ ಕ್ಯಾಂಪಸ್ ಸುಸಜ್ಜಿತವಾಗಿ ಅಭಿವೃದ್ಧಿಯಾಗುತ್ತಿದೆ. ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗೆ ಪ್ರಶಾಂತತಾಣವಾಗುತ್ತಿದೆ.ಜ್ಞಾನಸಿರಿ ಕ್ಯಾಂಪಸ್ ಅಭಿವೃದ್ಧಿಗೆ ಹಲವಾರು ಶಿಕ್ಷಣ ಪ್ರೇಮಿಗಳು ಸ್ವಯಂಪ್ರೇರಿತರಾಗಿ ಮುಂದೆ ಬಂದು ವಿವಿಧ ಅಭಿವೃದ್ಧಿ ಕಾರ್ಯಗಳನ್ನು ವಹಿಸಿಕೊಂಡು ನಿರ್ವಹಿಸುತ್ತಿದ್ದಾರೆ ಎಂದು ವಿವಿ ಕುಲಪತಿ ಪ್ರೊ. ವೆಂಕಟೇಶ್ವರಲು ಹೇಳಿದರು.

ಯುಗಾದಿ ಹಾಗೂ ರಂಜಾನ್ ಹಬ್ಬದ ಅಂಗವಾಗಿ ಸಮಾಜ ಸೇವಕರೂ ಹಾಗೂ ಬಿಜೆಪಿ ಮುಖಂಡರಾದ ಶಬ್ಬೀರ್ ಅಹ್ಮದ್, ಎಸ್.ರಾಮಚಂದ್ರರಾವ್, ಕೋಮಲ ವೀರಭದ್ರಯ್ಯ, ರಾಮಣ್ಣ, ರಫೀಕ್ ಅಹ್ಮದ್, ಇಮ್ರಾನ್ ಅಹ್ಮದ್ ಅವರು ಕುಲಪತಿ ಪ್ರೊ. ವೆಂಕಟೇಶ್ವರ್ ಅವರಿಗೆ ಶುಭಾಶಯಕೋರಿ ಸನ್ಮಾನಿಸಿದರು.

ಸಾರ್ವಜನಿಕರ ಸಹಯೋಗವಿದ್ದರೆ ವಿಶ್ವವಿದ್ಯಾಲಯವು ಉತ್ತಮವಾಗಿ ಬೆಳವಣಿಗೆಯಾಗುತ್ತದೆ.ತುಮಕೂರು ಕ್ಯಾಂಪಸ್‌ನಲ್ಲಿ ದಾನಿಗಳ ನೆರವಿನಿಂದ ಅನ್ನಪೂರ್ಣಾ ಯೋಜನೆಯಡಿ ಗ್ರಾಮೀಣ ಭಾಗದಿಂದ ಬರುವ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಊಟದ ವ್ಯವಸ್ಥೆ ಮಾಡಲಾಗಿದೆ. ಜ್ಞಾನಸಿರಿ ಕ್ಯಾಂಪಸ್‌ನಲ್ಲಿ ಕೂಡಾ ಅನೇಕ ದಾನಿಗಳು ವಿವಿಧ ಸೇವಾಜವಾಬ್ದಾರಿ ವಹಿಸಿಕೊಂಡು ಕಾಳಜಿಯಿಂದ ಸಹಕರಿಸಿದ್ದಾರೆ.ಸಾರ್ವಜನಿಕರು, ಸಂಘಸಂಸ್ಥೆಗಳು ವಿಶ್ವವಿದ್ಯಾಲಯದ ಬೆಳವಣಿಗೆಗೆ ಸ್ಪಂದಿಸಬೇಕು ಎಂದು ಪ್ರೊ.ವೆಂಕಟೇಶ್ವರಲು ಈ ವೇಳೆ ಹೇಳಿದರು.

ಜಿಲ್ಲೆಯಲ್ಲಿ ನೀರಾವರಿ ಸೇರಿದಂತೆ ವಿವಿಧ ಯೋಜನೆಗಳಿಗೆ 3ಸಾವಿರ ಎಕರೆ ಭೂ ಸ್ವಾಧೀನ ಜಿಲ್ಲಾಧಿಕಾರಿ ಶುಭಕಲ್ಯಾಣ್



ಚಿಕ್ಕನಾಯಕನಹಳ್ಳಿ:–ಜಿಲ್ಲೆಯಲ್ಲಿ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಿಗೆ ನೀರಾವರಿ ಯೋಜನೆಗಳಿಗೆ ಸಂಬಂದಿಸಿದಂತೆ ಸುಮಾರು 3ಸಾವಿರ ಎಕರೆ ಜಮೀನು ಭೂಸ್ವಾದೀನ ಪ್ರಕ್ರಿಯೆ ಮುಗಿದ್ದು ಕಾಮಗಾರಿ ನಡೆಸಲು ಸಂಬಂದ ಪಟ್ಟ ಇಂಜನಿಯರ್‌ಗಳಿಗೆ ಸೂಚನೆ ನೀಡಲಾಗಿದೆ ಎಂದು ಜಿಲ್ಲಾಧಿಕಾರಿ ಶುಭಕಲ್ಯಾಣ್ ತಿಳಿಸಿದರು.

ಪಟ್ಟಣದ ತಾಲ್ಲೂಕು ಆಡಳಿತ ಸೌಧದಲ್ಲಿ ಜನಸಂಪರ್ಕ ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು ಜಿಲ್ಲಾ ಉಸ್ತುವಾರಿ ಸಚಿವರು ತಿಳಿಸಿದಂತೆ ತಾಲ್ಲೂಕು ಹೋಬಳಿ ಮಟ್ಟದಲ್ಲಿ ಜನಸಂಪರ್ಕ ಸಭೆಯನ್ನು ಮಾಡಲಾಗುತ್ತಿದ್ದು ವಿವಿಧ ಅಭಿವೃದ್ಧಿ ಕೆಲಸಗಳ ಬಗ್ಗೆ ಜನರ ಸಮಸ್ಯೆಗಳ ಬಗ್ಗೆ ಪರಿಶೀಲನೆ ಮಾಡಲಾಗುತ್ತದೆ ಅದರಂತೆ ಈದಿನ ಮತಿಘಟ್ಟದಲ್ಲಿ ಸಭೆ ಮಾಡಿದ್ದು ನಂತರ ಇಲ್ಲಿ ಸಭೆ ಮಾಡಲಾಗಿದ್ದು ಇಲ್ಲಿ ಹುಳಿಯಾರು ಪಟ್ಟಣ ಪಂಚಾಯಿತಿಯ ಕಸವಿಲೇವಾರಿಯ ಬಗ್ಗೆ, ಖಾತೆ, ಪೋಡಿ, ಕೋರ್ಟ್ ಡಿಕ್ರಿಯ ಮೇಲೆ ಖಾತೆಗಳನ್ನು ಮಾಡುವ ಬಗ್ಗೆ, ಗ್ರಾಮಪಂಚಾಯಿತಿ ವ್ಯಾಪ್ತಿಯ ಸಮಸ್ಯೆಗಳ ಬಗ್ಗೆ ಅರ್ಜಿಗಳು ಬಂದಿವೆ ಎಂದ ಅವರು ಶಾಸಕರಾದ ಸಿ.ಬಿ.ಸುರೇಶ್‌ಬಾಬುರವರು ನಮ್ಮೊಂದಿಗೆ ಸಭೆಯಲ್ಲಿ ಭಾಗವಹಿಸಿ ಅರ್ಜಿಗಳ ಪರೀಶಿಲನೆ ನಡೆಸಿದರು ಇಂದು ಒಟ್ಟು 147 ಅರ್ಜಿಗಳು ಬಂದಿವೆ ಎಂದ ಅವರು ಹೇಮಾವತಿ ನಾಲಾ ಕಾಮಗಾರಿಯ ವಿಳಂಬಕ್ಕೆ ಅಲ್ಲಿನ ಆಳ ಹಾಗೂ ಅಗಲ ಹೆಚ್ಚಾಗಿದ್ದು ಹಾಗೂ ಅಲ್ಲಿನ ಮಣ್ಣು, ಹಾಗೂ ಬಂಡೆಗಳು ಸಿಕ್ಕಾಗ ಕೆಲಸ ಸ್ವಲ್ಪ ತಡವಾಗುತ್ತದೆ ಅದರೂ ಕಾಮಗಾರಿಯನ್ನು ಮುಗಿಸುವುದಾಗಿ ತಿಳಿಸಿದರು.

ಶಾಸಕ ಸಿ.ಬಿ.ಸುರೇಶ್‌ಬಾಬು ಮಾತನಾಡಿ ತಾಲ್ಲೂಕಿನಲ್ಲಿನ ಅಭಿವೃದ್ಧಿ ಕೆಲಸಗಳು ಸಮಯದೊಳಗೆ ಮುಗಿಸುವಂತೆಯು ಹಾಗೂ ಹೇಮಾವತಿ ನಾಲಾ ಕಾಮಗಾರಿಯನ್ನು ತೀವ್ರಗೊಳಿಸುವಂತೆ ತಿಳಿಸಿದರು.ಈ ಸಂದರ್ಭದಲ್ಲಿ ತಿಪಟೂರು ಉಪವಿಭಾಗಾದಿಕಾರಿ ಸಪ್ತಶ್ರೀ, ತಹಸೀಲ್ದಾರ್ ಮಮತಾ ಎಂ , ಇಒ ದೊಡ್ಡಸಿದ್ದಯ್ಯ, ಹಾಗೂ ತಾಲ್ಲೂಕು ಮಟ್ಟದ ಅದಿಕಾರಿಗಳು ಹಾಜರಿದ್ದರು.

ಯುವಪೀಳಿಗೆ ದೇಶದ ಭವಿಷ್ಯ : ಶಾಸಕ ಕೆ.ಎನ್.ರಾಜಣ್ಣ



ಮಧುಗಿರಿ : ಯುವ ಸಮೂಹ ಶಿಕ್ಷಣದ ಜೊತೆಗೆ ಸಾಮಾಜಿಕ ಹಾಗೂ ರಾಜಕೀಯ ವಿಷಯಗಳಲ್ಲಿಯೂ ಸಕ್ರಿಯವಾಗಿ ಪಾಲ್ಗೊಂಡು ದೇಶದ ಉಜ್ವಲ ಭವಿಷ್ಯ ನಿರ್ಮಾತೃಗಳಾಗಬೇಕು ಎಂದು ಮಾಜಿ ಸಚಿವ ಹಾಗೂ ಶಾಸಕ ಕೆ.ಎನ್.ರಾಜಣ್ಣ ಕರೆ ನೀಡಿದರು.

ಅವರು ಪಟ್ಟಣದ ಸರ್ಕಾರಿ ಪ್ರಥಮದರ್ಜೆ ಕಾಲೇಜಿನ ಸ್ನಾತಕ – ಸ್ನಾತಕೋತ್ತರ ಪದವಿಯ ವಿದ್ಯಾರ್ಥಿಗಳು ರಾಜ್ಯದ ಆರ್ಥಿಕ ಬಜೆಟ್ ಅಧಿವೇಶನ ಮೇಲಿನ ವಿಧಾನಸಭೆ ಹಾಗೂ ವಿಧಾನ ಪರಿಷತ್ ಗಳ ಚರ್ಚೆಯ ಕಲಾಪ ವೀಕ್ಷಿಸಲು ಆಗಮಿಸಿದ್ದ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿ ಮಾತನಾಡುತ್ತ ವಿದ್ಯಾರ್ಥಿಗಳು ಪ್ರಜಾಪ್ರಭುತ್ವ ವ್ಯವಸ್ಥೆಯ ಕಾರ್ಯವೈಖರಿಯನ್ನು ನೇರವಾಗಿ ತಿಳಿದುಕೊಳ್ಳುವುದು ಅತ್ಯಂತ ಮುಖ್ಯವಾಗಿದ್ದು, ಕಲಾಪ ವೀಕ್ಷಣೆ ಜ್ಞಾನವರ್ಧನೆಗೆ ಸಹಕಾರಿಯಾಗಲಿದೆ, ಸಮಾಜದ ಸಮಸ್ಯೆಗಳ ಅರಿವು ಹೊಂದಿ ಪ್ರಶ್ನೆಗಳನ್ನು ಕೇಳುವ ಮನೋಭಾವವನ್ನು ಬೆಳೆಸಿಕೊಳ್ಳಬೇಕು ಎಂದು ತಿಳಿ ಹೇಳಿದರು.

ಯಾವುದೇ ವಿದ್ಯಾರ್ಥಿಗಳು ಶಿಕ್ಷಣದಿಂದ ವಂಚಿತರಾಗಬಾರದು, ಉದ್ಯೋಗ ಆಧಾರಿತ ಶಿಕ್ಷಣವನ್ನು ಕಲ್ಪಿಸುವ ನಿಟ್ಟಿನಲ್ಲಿ ಜಿಟಿಟಿಸಿ ಸ್ಥಾಪನೆ, ನಿರುದ್ಯೋಗಿ ಯುವಕ ಯುವತಿಯರಿಗಾಗಿ ಉದ್ಯೋಗ ಮೇಳ, ಉತ್ತಮವಾದ ಸಾರಿಗೆ ವ್ಯವಸ್ಥೆ ಹಾಗೂ ಮೂಲಭೂತ ಸೌಕರ್ಯಗಳನ್ನು ದಕ್ಷತೆಯಿಂದ ಮತ್ತು ಪರಿಣಾಮಕಾರಿಯಾಗಿ ಬಳಸಿಕೊಂಡು ಉತ್ತಮ ನಾಗರೀಕರಾಗಿ ಮಾದರಿ ಜೀವನವನ್ನು ಕಟ್ಟಿಕೊಳ್ಳಬೇಕು ಎಂದರು.

ಕಲಾಪಗಳನ್ನು ನೇರವಾಗಿ ವೀಕ್ಷಿಸಿ ಮಾತನಾಡಿದ ವಿದ್ಯಾರ್ಥಿಗಳು ಇಲ್ಲಿಯವರೆಗೂ ಕೇವಲ ಪುಸ್ತಕಗಳಲ್ಲಿ ಅಡಕವಾಗಿರುವ ಜ್ಞಾನದ ಆಧಾರದ ಮೇಲೆ ಕಲ್ಪನೆ ಮಾಡಿಕೊಳ್ಳುತ್ತಿದ್ದೇವು, ಕಲಾಪಗಳ ನೇರ ವೀಕ್ಷಣೆಯಿಂದಾಗಿ ವಾಸ್ತಾವಿಕವಾಗಿ ಹೇಗೆ ಕಾರ್ಯನಿರ್ವಹಣೆ ಮಾಡುತ್ತವೆ ಎಂದು ತಿಳಿಯಲು ಸಾಧ್ಯವಾಯಿತು ಎಂದು ಹರ್ಷ ವ್ಯಕ್ತಪಡಿಸಿದರು.ವಿಧಾನ ಪರಿಷತ್ ಸದಸ್ಯ ರಾಜೇಂದ್ರ ವಿದ್ಯಾರ್ಥಿಗಳಿಗೆ ಗುಣಮಟ್ಟದ ಊಟದ ವ್ಯವಸ್ಥೆ ಮತ್ತು ನೆನಪಿನ ಕಾಣಿಕೆಯನ್ನು ವ್ಯವಸ್ಥೆ ಮಾಡಿದ್ದರು.ಕಾಲೇಜಿನ 170 ವಿದ್ಯಾರ್ಥಿಗಳು ಹಾಗೂ 14 ಜನ ಬೋಧಕ ಸಿಬ್ಬಂದಿ ಕಲಾಪ ವೀಕ್ಷಣೆಯಲ್ಲಿ ಭಾಗವಹಿಸಿದ್ದರು.





ತುಮಕೂರಿನ ಅಂತರಸನಹಳ್ಳಿಯಲ್ಲಿರುವ ಹೂವು ಮತ್ತು ತರಕಾರಿ ಮಾರುಕಟ್ಟೆಯಲ್ಲಿ ಯುಗಾದಿ ಹಬ್ಬದ ಪ್ರಯುಕ್ತ ಹೂವು, ಬಾಳೆಹಣ್ಣು, ಮಾವಿನ ಸೊಪ್ಪು ಹಾಗೂ ಬೇವಿನ ಸೊಪ್ಪು ಖರೀದಿಯಲ್ಲಿ ತೊಡಗಿರುವ ಜನಸಾಮಾನ್ಯರು.

ಮಧುಗಿರಿಯಲ್ಲಿ ಏ.3ರಂದು ಮುಖ್ಯಮಂತ್ರಿ ಕಾರ್ಯಕ್ರಮ; ಮಾ.20ರೊಳಗೆ ಸಿದ್ಧತೆ ಪೂರ್ಣಗೊಳಿಸಲು ಸಿಇಓ ಸೂಚನೆ



ತುಮಕೂರು: ಜಿಲ್ಲೆಯ ಮಧುಗಿರಿಯಲ್ಲಿ ಏಪ್ರಿಲ್ 3ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆಗಮಿಸುವ ಕಾರ್ಯಕ್ರಮಕ್ಕೆ ಉದ್ಘಾಟನೆ/ಶಂಕುಸ್ಥಾಪನೆ ಹಾಗೂ ಘೋಷಣೆಗೆ ಸಂಬಂಧಿಸಿದ ಕಾರ್ಯಗಳನ್ನು ಇದೇ 20ರೊಳಗೆ ಅಂತಿಮಗೊಳಿಸುವಂತೆ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಬಿ.ವಿ.ಅಶ್ವಿಜ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಜಿಲ್ಲಾ ಪಂಚಾಯತಿಯಲ್ಲಿ ಬುಧವಾರ ವಿವಿಧ ಹಂತದ ಅಧಿಕಾರಿಗಳೊಂದಿಗೆ ಪೂರ್ವಭಾವಿ ಸಭೆ ನಡೆಸಿದ ಅವರು, ಈಗಾಗಲೇ ಕಾರ್ಯಕ್ರಮದ ವೇದಿಕೆಯ ಜಾಗ, ಇನ್ನಿತರೆ ಪೂರ್ವ ಸಿದ್ಧತೆಗಳ ರೂಪು–ರೇಷೆಗಳನ್ನು ಮಾಡಲಾಗಿದೆ. ಅದರಂತೆ ಮುಖ್ಯಮಂತ್ರಿಯವರು ಉದ್ಘಾಟಿಸಲಿರುವ ಹಾಗೂ ಶಂಕುಸ್ಥಾಪನೆ ನೆರವೇರಿಸಲಿರುವ ಫಲಕಗಳನ್ನು ಶಿಷ್ಟಾಚಾರದಂತೆ ಸಿದ್ಧಪಡಿಸಿ ಸಂಬಂಧಿಸಿದ ಫಲಕದ ಪ್ರತಿಯನ್ನು ಇದೇ 20ರೊಳಗೆ ಜಿಲ್ಲಾಧಿಕಾರಿಗಳಿಗೆ ಸಲ್ಲಿಸುವಂತೆ ತಿಳಿಸಿದರು.



ಕಾರ್ಯಕ್ರಮ ನಡೆಯಲಿರುವ ಮಧುಗಿರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ 39 ಗ್ರಾಮ ಪಂಚಾಯತಿಗಳಿಂದ ಫಲಾನುಭವಿಗಳನ್ನು ಕಾರ್ಯಕ್ರಮಕ್ಕೆ ಕರೆತರಲು ವಾಹನ ವ್ಯವಸ್ಥೆ ಇತ್ಯಾದಿ ಸಿದ್ಧತೆಗಳನ್ನು ನಿಯೋಜಿತ ಅಧಿಕಾರಿಗಳು ಸಮರ್ಪಕವಾಗಿ ನಿರ್ವಹಿಸಿ ಮಾಹಿತಿಯನ್ನು ಒದಗಿಸಬೇಕು. ಅಲ್ಲದೆ, ಕಾರ್ಯಕ್ರಮದಲ್ಲಿ ಭಾಗವಹಿಸುವ ಫಲಾನುಭವಿಗಳಿಗೆ ಹಾಗೂ ಸಾರ್ವಜನಿಕರಿಗೆ ಊಟದ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ ಇತ್ಯಾದಿಗಳನ್ನು ಸಮರ್ಪಕವಾಗಿ ನಿರ್ವಹಿಸಬೇಕೆಂದು ಅವರು ಸೂಚಿಸಿದರು.

ಏಪ್ರಿಲ್ 3ರಂದು ಮುಖ್ಯಮಂತ್ರಿಗಳು ಹೆಲಿಕಾಪ್ಟರ್ ಮೂಲಕ ಆಗಮಿಸಲಿದ್ದು, ಸೂಕ್ತ ಹೆಲಿಪ್ಯಾಡ್ ವ್ಯವಸ್ಥೆಯನ್ನು ಹಾಗೂ ವೇದಿಕೆ ನಿರ್ಮಾಣ ಇತ್ಯಾದಿ ಜವಾಬ್ದಾರಿಗಳನ್ನು ವಹಿಸಿಕೊಂಡಿರುವ ಲೋಕೋಪಯೋಗಿ ಇಲಾಖೆ ಸಂಬಂಧಿಸಿದ ಕಾಮಗಾರಿಗಳಿಗೆ ದೃಢೀಕರಣ ನೀಡಬೇಕು ಎಂದರು. ಅಲ್ಲದೆ, ವಿವಿಧ ಪ್ರಮುಖ ಇಲಾಖೆಗಳಲ್ಲಿ ಆಗಿರುವ ಪ್ರಮುಖ ಅಭಿವೃದ್ಧಿ ಯೋಜನೆಗಳ ಮಾಹಿತಿಯನ್ನು ಮುಖ್ಯಮಂತ್ರಿಯವರ ಭಾಷಣದ ಕರಡು ತಯಾರಿಸಲಿರುವ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಅಧಿಕಾರಿಯವರಿಗೆ ಇದೇ 23ರೊಳಗೆ ಒದಗಿಸುವಂತೆಯೂ ಅವರು ಸೂಚಿಸಿದರು. ಸಭೆಯಲ್ಲಿ ಜಿಲ್ಲಾ ಪಂಚಾಯತಿಯ ಉಪಕಾರ್ಯದರ್ಶಿಗಳಾದ ಸಂಜೀವಪ್ಪ, ಈಶ್ವರಪ್ಪ, ಯೋಜನಾಧಿಕಾರಿ ಸಣ್ಣಮಸಿಯಪ್ಪ ಸೇರಿದಂತೆ ಎಲ್ಲಾ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಭಾಗವಹಿಸಿದ್ದರು.





ಉಗಮದ ಆದಿಯೋ... ಯುಗದ ಆದಿಯೋ...? ಚಾಂದ್ರಮಾನ ಯುಗಾದಿ ಸಾಹಿತಿ ವಡ್ಡಗೆರೆ ನಾಗರಾಜಯ್ಯ ಅವರು ಒದಗಿಸಿದ ಯುಗಾದಿ ಕವಿತೆಗಳು



ಉಗಾದಿ ಹಬ್ಬದ ದಿನ ಕುವೆಂಪು, ದ.ರಾ.ಬೇಂದ್ರೆ ಹಾಗೂ ಡಾ.ಸಿದ್ಧಲಿಂಗಯ್ಯ ಅವರು ಉಗಾದಿ ಕುರಿತು ಬರೆದಿರುವ ಮೂರು ಕವಿತೆಗಳನ್ನು ಇಲ್ಲಿ ನೀಡಿದ್ದೇನೆ...
ಉಗಮದ ಆದಿಯೋ... ಯುಗದ ಆದಿಯೋ...? ಚಾಂದ್ರಮಾನ ಯುಗಾದಿ– ಸೂರ್ಯಮಾನ ಯುಗಾದಿಯೋ?
ನಿಮ್ಮದಾವುದು?
ಹೊಸ ತಡಕು– ಹೊಸ ತೊಡಕು – ಹೊಸ ತೊಡಗು– ಕರಿಹಬ್ಬ– ಕರೂಳಿ ನಿಮ್ಮದಾವುದು?
ಬೇವು ಬೆಲ್ಲದ ಪಡಿ ನೀಡುತ್ತಿರುವ ನೀವು,
ಕನ್ನಡದ ಮೂರು ಮುಖ್ಯ ಕವಿತೆಗಳನ್ನು ಓದಲು ನೀಡುತ್ತಿರುವ ನನಗೆ ಹೋಳಿಗೆ– ಬಾಡಾಮ್ರ ನೀಡೋದು ಮಾತ್ರ ಮರಿಬ್ಯಾಡಿ...
ಈಗ ಇಲ್ಲಿರುವ ಕವಿತೆಗಳನ್ನು ಓದಿರಿ... ನೀವು ಯುಗಾದಿ ಕುರಿತು ಬರೆದಿರುವ ಅಥವಾ ಓದಿರುವ ಕವಿತೆಗಳನ್ನು ಕುರಿತು ಅಭಿಪ್ರಾಯ ಹಂಚಿಕೊಳ್ಳಿ... ಸಾಧ್ಯವಾದರೆ ಯುಗಾದಿ ಆಚರಣೆಗೆ ನೀವೂ ಒಂದು ಕವಿತೆ ಬರೆಯಿರಿ.

---- ವಡ್ಡಗೆರೆ ನಾಗರಾಜಯ್ಯ 8722724174

ಯುಗಾದಿ

ಸುರಲೋಕದ ಸುರನದಿಯಲಿ ಮಿಂದು,
ಸುರಲೋಕದ ಸಂಪದವನು ತಂದು,
ನವ ಸಂವತ್ಸರ ಭೂಮಿಗೆ ಬಂದು
ಕರೆಯುತ್ತಿದೆ ನಮ್ಮನು ಇಂದು!
ಗೀತೆಯ ಘೋಷದಿ ನವ ಅತಿಥಿಯ ಕರೆ;
ಹೃದಯ ದ್ವಾರವನಗಲಕೆ ತೆರೆ, ತೆರೆ!
ನವ ಜೀವನ ರಸ ಬಾಳಿಗೆ ಬರಲಿ,
ನೂತನ ಸಾಹಸವೈತರಲಿ!
ಗತವರ್ಷದ ಮೃತಪಾಪವ ಸುಡು, ತೊರೆ;
ಅಪಜಯ ಅವಮಾನಗಳನು ಬಿಡು, ಮರೆ;
ಕಳಚಲಿ ಬೀಳಲಿ ಬಾಳಿನ ಹಳೆಪೊರೆ,
ನವ ವತ್ಸರವನು ಕೂಗಿ ಕರೆ!
ಸಂಶಯ ದ್ವೇಷಾಸೂಯೆಯ ದಬ್ಬು;
ಸುಖ ಶ್ರದ್ಧಾ ಧೈರ್ಯಗಳನು ತಬ್ಬು.
ಉರಿಯಲಿ ಸತ್ಯದ ಊದಿನ ಕಡ್ಡಿ,
ಚಿರ ಸೌಂದರ್ಯದ ಹಾಲ್ಮಡ್ಡಿ!
ತೊಲಗಲಿ ದುಃಖ, ತೊಲಗಲಿ ಮತ್ಸರ,
ಪ್ರೇಮಕೆ ಮೀಸಲು ನವ ಸಂವತ್ಸರ!
ನಮ್ಮೆದೆಯಲ್ಲಿದೆ ಸುಖನಿಧಿ ಎಂದು
ಹೊಸ ಹೂಣಿಕೆಯನು ತೊಡಗಿಂದು!
ಮಾವಿನ ಬೇವಿನ ತೋರಣ ಕಟ್ಟು,
ಬೇವುಬೆಲ್ಲಗಳನೊಟ್ಟಿಗೆ ಕುಟ್ಟು!
ಜೀವನವೆಲ್ಲಾ ಬೇವೂಬೆಲ್ಲ;
ಎರಡೂ ಸವಿವನೆ ಕಲಿ ಮಲ್ಲ!
ಹೊಸ ಮರದಲಿ ಹೂ ತುಂಬಿದೆ ನೋಡು!
ಆಲಿಸು! ಜೇನಿನ ಹಬ್ಬದ ಹಾಡು!
ಜೀವನವೆಂಬುದು ಹೂವಿನ ಬೀಡು;
ಕವಿಯೆದೆ ಹೆಜ್ಜೇನಿನ ಗೂಡು!
ಕವಿಯೊಲ್ಮೆಯ ಕೋ! ಧನ್ಯ ಯುಗಾದಿ!
ಮರಳಲಿ ಇಂತಹ ನೂರು ಯುಗಾದಿ!
ಇದೆ ಕೋ ಹೊಸವರುಷದ ಸವಿಮುತ್ತು!
ಅದಕೊಂದಾಲಿಂಗನದೊತ್ತು!

~ ಕುವೆಂಪು
(ಪಕ್ಷಿಕಾಶಿ 27–3–1933)

ಯುಗಾದಿ

ಯುಗಯುಗಾದಿ ಕಳೆದರೂ
ಯುಗಾದಿ ಮರಳಿ ಬರುತಿದೆ.
ಹೊಸ ವರುಷಕೆ ಹೊಸ ಹರುಷವ
ಹೊಸತು ಹೊಸತು ತರುತಿದೆ.
ಹೊಂಗೆ ಹೂವ ತೊಂಗಲಲ್ಲಿ
ಭೃಂಗದ ಸಂಗೀತ ಕೇಲಿ
ಮತ್ತೆ ಕೇಳಬರುತಿದೆ.
ಬೇವಿನ ಕಹಿ ಬಾಳಿನಲ್ಲಿ
ಹೂವಿನ ನಸುಗಂಪು ಸೂಸಿ
ಜೀವಕಳೆಯ ತರುತಿದೆ.
ಕಮ್ಮನೆ ಬಾಣಕ್ಕೆ ಸೋತು
ಜುಮ್ಮನೆ ಮಾಮರವು ಹೂತು
ಕಾಮಗಾಗಿ ಕಾದಿದೆ.
ಸುಗ್ಗಿ ಸುಗ್ಗಿ ಸುಗ್ಗಿ ಎಂದು
ಹಿಗ್ಗಿ ಗಿಳಿಯ ಸಾಲು ಸಾಲು
ತೋರಣದೊಲು ಕೋದಿದೆ.
ವರುಷಕೊಂದು ಹೊಸತು ಜನ್ಮ
ಹರುಷಕೊಂದು ಹೊಸತು ನೆಲೆಯು
ಅಖಿಲ ಜೀವಜಾತಕೆ!
ಒಂದೆ ಒಂದು ಜನ್ಮದಲ್ಲಿ
ಒಂದೆ ಬಾಲ್ಯ ಒಂದೆ ಹರೆಯ
ನಮಗದಷ್ಟೆ ಏತಕೆ?
ನಿದ್ದೆಗೊಮ್ಮೆ ನಿತ್ಯ ಮರಣ
ಎದ್ದ ಸಲ ನವೀನ ಜನನ
ನಮಗೆ ಏಕೆ ಬಾರದೊ?
ಎಲೆ ಸನತ್ಕುಮಾರದೇವ!
ಸಲೆ ಸಾಹಸಿ ಚಿರಂಜೀವ!
ನಿನಗೆ ಲೀಲೆ ಸೇರದೋ?
ಯುಗಯುಗಾದಿ ಕಳೆದರೂ
ಯುಗಾದಿ ಮರಳಿ ಬರುತಿದೆ.
ಹೊಸ ವರುಷಕೆ ಹೊಸ ಹರುಷವ
ಹೊಸತು ಹೊಸತು ತರುತಿದೆ.
ನಮ್ಮನಷ್ಟೇ ಮರೆತಿದೆ

--- ದ.ರಾ.ಬೇಂದ್ರೆ

ಯುಗಾದಿ

ನೆಲದ ಹೆರಿಗೆಯ ನೋವು ಅಂಗುಲಂಗುಲ ಕರಗಿ ಹಸಿರು
ಚಿಗುರಿನ ಕುಣಿತ ಹೂನಗೆಯ ನೋಟ
ಅವಳಿ ಫಲ ತಂದಿತ್ತು ಆಕಾಶದೊರೆನಂಟು
ಮರಗಿಡದ ಬಳಗಕ್ಕೆ ಉಡುಗೊರೆಯ ಹಬ್ಬ

ಹೂಗೊಂಚಲಿಗೆ ಬಣ್ಣ, ಪುಟ್ಟ ಹಕ್ಕಿಗೆ ಹಾಡು
ಬೆಟ್ಟಕ್ಕೆ ಎದೆಯೆತ್ತಿ ನಿಲ್ಲುವ ಧೈರ್ಯ
ಹೊಳೆಯ ನೀರಿಗೆ ಉಗುರು ಬಿಸಿ
ಗಾಳಿ ನೆರಳಿಗೆ ತಂಪು ತಂದ ಯುಗಾದಿ
ಕುಸಿದು ಕೊರಗುವ ಬಾಳಿಗೇನ ತಂದೆ.

ಬೇವು ಬೆಲ್ಲದ ಅದೇ ಹಳೆಯ ಪಾಠ
ಸ್ವಂತದ್ದೋ ಸಾಲದ್ದೋ ಒಬ್ಬಟಿನೂಟ
ಬದುಕೇ ಇಲ್ಲದ ಅನಾದಿಯ ಲೆಕ್ಕಕ್ಕೆ
ನೀನೊಂದು ಶಬ್ದ ಮಾತ್ರ.

ಆರಳದೆ ಕಮರಿ ಹೋಗುವ ಜೀವಗಳು
ನಕ್ಷತ್ರದಂತೆ ನಗಲಾರದ ಬಾಳುಗಳು
ಎದೆಸೆಟೆದು ನಿಲ್ಲಲಾರದ ದೇಹಗಳು
ಕಣ್ಣು ಕುಕ್ಕುವಾಗ ಇದು ಯಾರ ಯುಗಾದಿ ?

ಬೀದಿವಾಸಿಯ ಅಳಲು ಜೋಪಡಿಯ ಕತ್ತಲು ದಿನದಿನದ
ಅನ್ನಕ್ಕೆ ಮಾರಿಕೊಳ್ಳುವ ಮಯ್ಯಿ
ಆಸೆಯಲಿ ಚಾಚಿರುವ ಲಂಚಕೋರನ ಕಯ್ಯಿ ಯುಗಯುಗಪ್ಪ
ಕಳೆದರೂ ತಿಳಿಯದೇನು.

~ ಡಾ. ಸಿದ್ದಲಿಂಗಯ್ಯ
================

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ
ಜಾಹೀರಾತಿಗಾಗಿ ಸಂಪರ್ಕಿಸಿ: 9901010109

ಶಾಲೆ: ಜ್ಞಾನ ದೇಗುಲವೇ ಅಥವಾ ವ್ಯವಹಾರದ ಮಾರುಕಟ್ಟೆಯೇ?

ಇಂದಿನ ಶಿಕ್ಷಣ ವ್ಯವಸ್ಥೆ ಬಗ್ಗೆ ಪೋಷಕರ ತೀಕ್ಷ್ಣ ಪ್ರಶ್ನೆ

ಒಂದು ಕಾಲದಲ್ಲಿ ಶಾಲೆ ಎಂದರೆ ಜ್ಞಾನ, ಶಿಸ್ತು ಮತ್ತು ಸಂಸ್ಕಾರದ ದೇಗುಲ ಎಂಬಂತಿತ್ತು. "ಗುರು ಬ್ರಹ್ಮ, ಗುರು ವಿಷ್ಣು ಗುರುದೇವ ಮಹೇಶ್ವರ" ಎಂದು ಶಿಕ್ಷಕರನ್ನು ದೇವರ ಸ್ಥಾನದಲ್ಲಿ ಪೂಜಿಸಲಾಗುತ್ತಿತ್ತು. ಮಕ್ಕಳನ್ನು ಶಾಲೆಗೆ ಕಳುಹಿಸುವುದು ಎಂದರೆ ಅವರ ಭವಿಷ್ಯವನ್ನು ಸುರಕ್ಷಿತ ಕೈಗಳಲ್ಲಿ ಇಟ್ಟಂತಾಗಿತ್ತು. ಆದರೆ ಇಂದಿನ ಪರಿಸ್ಥಿತಿಯನ್ನು ನೋಡಿದಾಗ ಅನೇಕ ಪೋಷಕರ ಮನಸ್ಸಿನಲ್ಲಿ ಕಾಡುತ್ತಿರುವ ಪ್ರಶ್ನೆ ಶಾಲೆ ಇನ್ನೂ ಜ್ಞಾನ ದೇಗುಲವಾಗಿದೆಯೇ? ಅಥವಾ ಅದು ನಿಧಾನವಾಗಿ ವ್ಯವಹಾರದ ಮಾರುಕಟ್ಟೆಯಾಗಿ ಮಾರ್ಪಡುತ್ತಿದೆಯೇ?
ಇಂದು ಶಿಕ್ಷಣ ಕ್ಷೇತ್ರದಲ್ಲಿ ನಡೆಯುತ್ತಿರುವ ಹಲವಾರು ಬೆಳವಣಿಗೆಗಳು ಪೋಷಕರಲ್ಲಿ ಗಂಭೀರ ಆತಂಕವನ್ನು ಹುಟ್ಟಿಸುತ್ತಿವೆ. ಒಂದು ಕಡೆ ಸರ್ಕಾರಿ ಶಾಲೆಗಳು ವಿದ್ಯಾರ್ಥಿಗಳ ಕೊರತೆಯಿಂದ ಸಂಕಷ್ಟಕ್ಕೆ ಸಿಲುಕಿವೆ. ಸರ್ಕಾರವೇ ಸರ್ಕಾರಿ ಶಾಲೆಗಳನ್ನು ಮುಚ್ಚಿಸುವ ಆದೇಶ ಹೊಡಿಸುತ್ತಿದೆ. ಇದಕ್ಕೆ ಕಾರಣವಾದ ಅಂಶಗಳನ್ನು ತಿಳಿದುಕೊಳ್ಳಬೇಕಾದ ಸಾರ್ವಜನಿಕ ಶಿಕ್ಷಣ ಇಲಾಖೆ ಅದರ ಬಗ್ಗೆ ಗಮನಹರಿಸಿದಿರುವುದು ವಿಪರ್ಯಾಸವೇ ಸರಿ. ಬದಲಾವಣೆ ಜಗದ ನಿಯಮ ಇದರಂತೆ ಸರ್ಕಾರಿ ಶಾಲೆಗಳು ಕಾಲಕ್ಕೆ ತಕ್ಕಂತೆ ತಮ್ಮನ್ನು ತಾವು ಬದಲಾಯಿಸಿಕೊಂಡು ನಡೆದುಕೊಂಡು ಬಂದಿದ್ದರೆ ಈಗಿನ ಸರ್ಕಾರಿ ಶಾಲೆಗಳು ವಿದ್ಯಾರ್ಥಿಗಳಿಲ್ಲದೆ ಮುಚ್ಚುವಂತಹ ಪರಿಸ್ಥಿತಿಗೆ ಬರುತ್ತಿರಲಿಲ್ಲವೇನೋ? ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗುತ್ತಿರುವುದು ಕೇವಲ ಸರ್ಕಾರಿ ಶಾಲೆಗಳಲ್ಲಿ ಮಾತ್ರ ಇದಕ್ಕೆ ಕಾರಣ ಸರ್ಕಾರಿ ಶಾಲೆಗಳು ಕಾಲಕ್ಕೆ ತಕ್ಕಂತೆ ಬದಲಾವಣೆಯಾಗದಿರುವುದು.
ಮತ್ತೊಂದು ಕಡೆ ಖಾಸಗಿ ಶಾಲೆಗಳು ಆಕಾಶದೆತ್ತರದ ಶುಲ್ಕದ ಮೂಲಕ ಮಧ್ಯಮ ಮತ್ತು ಸಾಮಾನ್ಯ ವರ್ಗದ ಕುಟುಂಬಗಳ ಮೇಲೆ ಭಾರವಾದ ಹೊರೆ ಹಾಕುತ್ತಿವೆ.ಲಕ್ಷಾಂತರ ರೂಪಾಯಿ ಶುಲ್ಕ, ಪ್ರತಿವರ್ಷ ಹೊಸ ಪುಸ್ತಕಗಳು, ಕಡ್ಡಾಯ ಯೂನಿಫಾರ್ಮ್, ಬಸ್ ಶುಲ್ಕ, ವಿವಿಧ ಕಾರ್ಯಕ್ರಮಗಳ ಹೆಸರಿನಲ್ಲಿ ಸಂಗ್ರಹವಾಗುವ ಹಣ ಇವೆಲ್ಲವೂ ಸೇರಿ ಶಿಕ್ಷಣವನ್ನು ಸಾಮಾನ್ಯ ಜನರಿಗೆ ದುಬಾರಿಯಾಗಿಸುತ್ತಿವೆ.
ಶಿಕ್ಷಣ ಸೇವೆಯೇ ಅಥವಾ ಲಾಭದ ವ್ಯವಹಾರವೇ? ಎಂಬ ಪ್ರಶ್ನೆ ಈಗ ಪೋಷಕರ ನಡುವೆ ಕೇಳಿಬರುತ್ತಿದೆ.
ಇದರ ಜೊತೆಗೆ ಮತ್ತೊಂದು ಗಂಭೀರ ಸಮಸ್ಯೆ ಮಕ್ಕಳ ಮೇಲೆ ಹೆಚ್ಚುತ್ತಿರುವ ಪಾಠಭಾರ. ಪುಟ್ಟ ಮಕ್ಕಳಿಗೂ ಕೂಡ ಅನೇಕ ಪುಸ್ತಕಗಳು, ಪ್ರಾಜೆಕ್ಟ್‌ಗಳು, ಪರೀಕ್ಷೆಗಳು ಮತ್ತು ಅಂಕಗಳ ಒತ್ತಡ ಹೆಚ್ಚುತ್ತಿದೆ. ಬೆಳಿಗ್ಗೆ ಶಾಲೆ, ಸಂಜೆ ಟ್ಯೂಷನ್, ರಾತ್ರಿ ಹೋಂವರ್ಕ್ ಈ ಓಟದಲ್ಲಿ ಮಕ್ಕಳ ಬಾಲ್ಯವೇ ಕಳೆದುಹೋಗುತ್ತಿರುವುದಿಲ್ಲವೇ? ಎಂಬ ಪ್ರಶ್ನೆ ಪೋಷಕರಲ್ಲಿ ಮೂಡುತ್ತಿದೆ.
ಶಾಲೆಯಲ್ಲಿನ ಪಾಠ ಸಾಕಾಗದೆ ಟ್ಯೂಷನ್ ಮತ್ತು ಕೋಚಿಂಗ್ ತರಗತಿಗಳು ಅವಶ್ಯಕವಾಗುತ್ತಿರುವುದು ಶಿಕ್ಷಣ ವ್ಯವಸ್ಥೆಯಲ್ಲಿನ ಮತ್ತೊಂದು ದೋಷವನ್ನು ಬಯಲಿಗೆಳೆಯುತ್ತದೆ. ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ಸಿಗುತ್ತಿದ್ದರೆ ಟ್ಯೂಷನ್ ಕೇಂದ್ರಗಳ ಅಗತ್ಯ ಏಕೆ ಹೆಚ್ಚುತ್ತಿದೆ? ಎಂಬ ಪ್ರಶ್ನೆಗೆ ಸ್ಪಷ್ಟ ಉತ್ತರ ಸಿಗುವುದಿಲ್ಲ.
ಇದಕ್ಕಿಂತಲೂ ಹೆಚ್ಚು ಚಿಂತಾಜನಕ ಸಂಗತಿ ಎಂದರೆ, ಇಷ್ಟು ವರ್ಷಗಳ ಶಾಲಾ ಶಿಕ್ಷಣದ ನಂತರವೂ ಅನೇಕ ಮಕ್ಕಳು ಜೀವನದಲ್ಲಿ ಎದುರಾಗುವ ಸಾಮಾನ್ಯ



ಸಮಸ್ಯೆಗಳನ್ನು ಪರಿಹರಿಸಲು ಸಿದ್ಧರಾಗಿರುವುದಿಲ್ಲ. ಪುಸ್ತಕದಲ್ಲಿರುವ ಉತ್ತರಗಳನ್ನು ಕಂಠಪಾಠ ಮಾಡುವುದು ಮಾತ್ರವೇ ಶಿಕ್ಷಣವಲ್ಲ. ಸ್ವತಂತ್ರ ಚಿಂತನೆ, ಸೃಜನಶೀಲತೆ, ಮತ್ತು ಜೀವನ ಕೌಶಲ್ಯಗಳು ಶಿಕ್ಷಣದ ಮೂಲಭೂತ ಭಾಗವಾಗಬೇಕು. ಆದರೆ ಇಂದಿನ ವ್ಯವಸ್ಥೆಯಲ್ಲಿ ಅಂಕಗಳೇ ಮುಖ್ಯವಾಗಿದ್ದು, ಮಕ್ಕಳ ಕುತೂಹಲ ಮತ್ತು ಕಲಿಕೆಯ ಆಸಕ್ತಿ ನಿಧಾನವಾಗಿ ಕುಗ್ಗುತ್ತಿದೆ.
ಇದೇ ಸಮಯದಲ್ಲಿ ತಂತ್ರಜ್ಞಾನವು ಶಿಕ್ಷಣದ ರೂಪವನ್ನೇ ಬದಲಾಯಿಸುತ್ತಿದೆ. ಇಂಟರ್ನೆಟ್, ಡಿಜಿಟಲ್ ವೇದಿಕೆಗಳು ಮತ್ತು ಆನ್‌ಲೈನ್ ತರಗತಿಗಳ ಮೂಲಕ ಮಕ್ಕಳು ಅನೇಕ ವಿಷಯಗಳನ್ನು ಸ್ವತಃ ಕಲಿಯುವ ಅವಕಾಶಗಳು ಹೆಚ್ಚಾಗಿವೆ. ಕೆಲವು ಪೋಷಕರು ಮನೆ ಶಿಕ್ಷಣ (ಹೋಮ್ ಸ್ಕೂಲಿಂಗ್) ಮತ್ತು ಕೌಶಲ್ಯಾಧಾರಿತ ಶಿಕ್ಷಣದ ಕಡೆ ಗಮನ ಹರಿಸಲು ಆರಂಭಿಸಿರುವುದು ಸಹ ಇದೇ ಕಾರಣದಿಂದ.
ಆದರೆ ಇಲ್ಲಿ ಒಂದು ಮಹತ್ವದ ಸತ್ಯವನ್ನು ಮರೆಯಬಾರದು. ಶಾಲೆ ಕೇವಲ ಪುಸ್ತಕದ ಪಾಠ ಕಲಿಸುವ ಸ್ಥಳವಲ್ಲ, ಅದು ಮಕ್ಕಳಿಗೆ ಸಮಾಜದಲ್ಲಿ ಬದುಕುವ ಪಾಠ ಕಲಿಸುವ ಸ್ಥಳ. ಸ್ನೇಹ, ಸಹಕಾರ, ಶಿಸ್ತು, ಸಹನಶೀಲತೆ ಮತ್ತು ಮೌಲ್ಯಗಳನ್ನು ಬೆಳೆಸುವ ವಾತಾವರಣ ಶಾಲೆಯಲ್ಲಿಯೇ ಸಿಗುತ್ತದೆ.
ಆದರೆ ಅದೇ ಸಮಯದಲ್ಲಿ ಶಿಕ್ಷಣ ವ್ಯವಸ್ಥೆಯ ದಿಕ್ಕು ಸರಿಯಾಗಿದೆಯೇ ಎಂಬ ಪ್ರಶ್ನೆ ಇಂದು ಗಂಭೀರವಾಗಿ ಚರ್ಚೆಯಾಗಬೇಕು.
ಶಾಲೆಗಳು ಅಂಕಗಳ ಕಾರ್ಖಾನೆಗಳಾಗಬಾರದು. ಅವು ಮಕ್ಕಳ ಪ್ರತಿಭೆಯನ್ನು ಗುರುತಿಸುವ ಮತ್ತು ಬೆಳೆಸುವ ಕೇಂದ್ರಗಳಾಗಬೇಕು. ಶಿಕ್ಷಕರು ಕೇವಲ ಪಾಠ ಹೇಳುವವರಲ್ಲ, ಮಕ್ಕಳಿಗೆ ಪ್ರೇರಣೆಯ ಮೂಲವಾಗಬೇಕು. ಶಿಕ್ಷಣವು ಕೇವಲ ಪರೀಕ್ಷೆ ಪಾಸಾಗಲು ಅಲ್ಲ, ಜೀವನದಲ್ಲಿ ಯಶಸ್ವಿಯಾಗಲು ಸಹಾಯ ಮಾಡುವಂತಿರಬೇಕು.
ಇಂದು ಪೋಷಕರು ಕೇಳುತ್ತಿರುವ ಪ್ರಶ್ನೆ ಬಹಳ ಸರಳವಾದರೂ ಗಂಭೀರವಾದುದು
ನಾವು ಮಕ್ಕಳನ್ನು ಪ್ರತಿದಿನ ಶಾಲೆಗೆ ಕಳುಹಿಸುತ್ತಿದ್ದೇವೆ. ಆದರೆ ಅವರು ನಿಜವಾಗಿಯೂ ಜೀವನಕ್ಕೆ ಸಿದ್ಧರಾಗುತ್ತಿದೆಯೇ? ಈ ಪ್ರಶ್ನೆಗೆ ಶಿಕ್ಷಣ ವ್ಯವಸ್ಥೆ, ಸರ್ಕಾರ ಮತ್ತು ಸಮಾಜ ಸಮಗ್ರವಾಗಿ ಉತ್ತರ ನೀಡಬೇಕಾಗಿದೆ. ಇಲ್ಲವಾದರೆ ಒಂದು ದಿನ ಜನರು ಶಿಕ್ಷಣ ವ್ಯವಸ್ಥೆಯ ಮೇಲಿನ ನಂಬಿಕೆಯನ್ನು ಕಳೆದುಕೊಳ್ಳುವ ಅಪಾಯ ಇದೆ.
ಏಕೆಂದರೆ ಮಕ್ಕಳ ಶಿಕ್ಷಣವು ಕೇವಲ ಒಂದು ಕುಟುಂಬದ ವಿಷಯವಲ್ಲ
ಅದು ದೇಶದ ಭವಿಷ್ಯವನ್ನು ನಿರ್ಧರಿಸುವ ಅತಿ ಮಹತ್ವದ ವಿಚಾರವಾಗಿದೆ.



ಭೋಜರಾಜ ಬಳ್ಳೇಕೆರೆ
ಪೋಷಕರು ಮತ್ತು ಅಧ್ಯಕ್ಷರು
ಸದೃಢ ಫೌಂಡೇಶನ್

ಮಾ.23ರಂದು ಜಿಲ್ಲೆಗೆ ನ್ಯಾ. ಆರ್. ಗುರುರಾಜನ್ ಭೇಟಿ

ತುಮಕೂರು: ಕರ್ನಾಟಕ ಉಚ್ಚ ನ್ಯಾಯಾಲಯದ ಮಾಜಿ ನ್ಯಾಯಾಧೀಶರಾದ ಗೌರವಾನ್ವಿತ ನ್ಯಾಯಮೂರ್ತಿ ಆರ್. ಗುರುರಾಜನ್ ಅವರು ಮಾರ್ಚ್ 23ರಂದು ಜಿಲ್ಲೆಗೆ ಭೇಟಿ ನೀಡಲಿದ್ದಾರೆ.
ಅಂದು ಬೆಳಿಗ್ಗೆ 10 ಗಂಟೆಗೆ ಜಿಲ್ಲಾ ಕೇಂದ್ರ ಗ್ರಂಥಾಲಯದ ಆವರಣದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ವತಿಯಿಂದ ಹಿರಿಯ ನಾಗರಿಕರ ಅನುಕೂಲಕ್ಕಾಗಿ ಆಯೋಜಿಸಿರುವ ಕಾನೂನು ಸಾಕ್ಷರತಾ ಕಾರ್ಯಕ್ರಮ ಹಾಗೂ ಆರೋಗ್ಯ ತಪಾಸಣಾ ಶಿಬಿರದಲ್ಲಿ ಭಾಗವಹಿಸುವರು. ನಂತರ ತುಮಕೂರು ಜಿಲ್ಲಾ ಕೇಂದ್ರದ ಒಂದು ಸರ್ಕಾರಿ ಆಸ್ಪತ್ರೆ ಮತ್ತು ತಾಲ್ಲೂಕು/ಹೋಬಳಿ ಮಟ್ಟದ ಒಂದು ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ಹಿರಿಯ ನಾಗರಿಕರಿಗೆ ಇರುವ ಸೌಲಭ್ಯಗಳನ್ನು ವೀಕ್ಷಿಸುವರು ಎಂದು ಪ್ರಕಟಣೆ ತಿಳಿಸಿದೆ.

ಯುಗಾದಿ ಅಂದರೆ ಹಿಂದೂಗಳ ಹೊಸ ವರ್ಷಾರಂಭ



ಯುಗಾದಿ ಅಂದರೆ ಚೈತ್ರ ಶುಕ್ಲ ಪ್ರತಿಪದೆ ಅಂದರೆ ಹಿಂದೂಗಳ ಹೊಸ ವರ್ಷಾರಂಭದ ದಿನ ! ಈ ತಿಥಿಯಂದು ವರ್ಷಾರಂಭವನ್ನು ಮಾಡಲು ನೈಸರ್ಗಿಕ, ಐತಿಹಾಸಿಕ ಮತ್ತು ಆಧ್ಯಾತ್ಮಿಕ ಕಾರಣಗಳಿವೆ. ಬ್ರಹ್ಮದೇವನು ಈ ದಿನದಿಂದು ಸೃಷ್ಟಿಯನ್ನು ನಿರ್ಮಿಸಿದನು. ಅರ್ಥಾತ್ ಈ ದಿನ ಸತ್ಯಯುಗವು ಪ್ರಾರಂಭವಾಯಿತು. ಆದುದರಿಂದಲೇ ಈ ದಿನದಂದು ವರ್ಷಾರಂಭವನ್ನು ಮಾಡುತ್ತಾರೆ. 2026 ರಲ್ಲಿ ಮಾರ್ಚ 19 ರಂದು ಶ್ರೀ ಪರಾಭವ ನಾಮ ಸಂವತ್ಸರವು ಪ್ರಾರಂಭವಾಗುವುದು.
ಯುಗಾದಿಯಂದು ತೇಜ ಮತ್ತು ಪ್ರಜಾಪತಿ ಲಹರಿಗಳು ಹೆಚ್ಚಿನ ಪ್ರಮಾಣದಲ್ಲಿ ಕಾರ್ಯನಿರತವಾಗಿರುತ್ತವೆ. ಸೂರ್ಯೋದಯದ ಸಮಯದಲ್ಲಿ ಈ ಲಹರಿಗಳಿಂದ ಪ್ರಕ್ಷೇಪಿತವಾಗುವ ಚೈತನ್ಯವು ಹೆಚ್ಚಿನ ಸಮಯದವರೆಗೆ ಉಳಿಯುತ್ತದೆ. ಅದು ಜೀವದ ಜೀವಕೋಶಗಳಲ್ಲಿ ಸಂಗ್ರಹವಾಗುತ್ತದೆ ಹಾಗೂ ಅವಶ್ಯಕತೆಗನುಸಾರ ಆ ಜೀವದಿಂದ ಉಪಯೋಗಿಸಲ್ಪಡುತ್ತದೆ.
ನೈಸಗಿಕ ಕಾರಣಗಳು
ಸರಿಸುಮಾರು ಪ್ರತಿಪದೆಯ ಸಮಯದಲ್ಲಿ ಸೂರ್ಯನು ವಸಂತ ಸಂಪಾತದ ಮೇಲೆ ಬರುತ್ತಾನೆ (ಸಂಪಾತ ಬಿಂದು ಎಂದರೆ (ಮಕರ) ಕ್ರಾಂತಿವೃತ್ತ ಮತ್ತು ವಿಷುವವೃತ್ತ (ಕರ್ಕಾಟಕ) ಈ ಎರಡು ವೃತ್ತಗಳು ಯಾವ ಬಿಂದುವಿನಲ್ಲಿ ಪರಸ್ಪರ ಭೇದಿಸುತ್ತವೆಯೋ ಆ ಬಿಂದು) ಮತ್ತು ವಸಂತ ಋತುವು ಪ್ರಾರಂಭವಾಗುತ್ತದೆ. ಎಲ್ಲ ಋತುಗಳಲ್ಲಿ 'ಕುಸುಮಾಕರಿ ವಸಂತ ಋತುವು ನನ್ನ ವಿಭೂತಿಯಾಗಿದೆ' ಎಂದು ಭಗವಂತನು ಶ್ರೀಮದ್ಭಗವದ್ಗೀತೆಯಲ್ಲಿ (10:35) ಹೇಳಿದ್ದಾನೆ. ಈ ಸಮಯದಲ್ಲಿ ಸಮಶೀತೋಷ್ಣ, ಉತ್ಸಾಹವರ್ಧಕ ಮತ್ತು ಆಹ್ಲಾದಕರ ವಾತಾವರಣವಿರುತ್ತದೆ. ಶಿಶಿರ ಋತುವಿನಲ್ಲಿ ಗಿಡಮರಗಳ ಎಲೆಗಳು ಉದುರಿ ಹೋಗಿರುತ್ತವೆ ಮತ್ತು ಪ್ರತಿಪದೆಯ ಸಮಯದಲ್ಲಿ ಅವುಗಳಿಗೆ ಹೊಸ ಚಿಗುರು ಬರುತ್ತಿರುತ್ತವೆ. ಗಿಡಮರಗಳು ಚೆನ್ನಾಗಿ ಕಾಣುತ್ತವೆ. ಯುಗಾದಿ ಪಾಡ್ಯದಂದು ಪ್ರಾರಂಭವಾಗುವ ಹೊಸವರ್ಷದ ಕಾಲಚಕ್ರವು ವಿಶ್ವದ ಉತ್ಪತ್ತಿಯ ಕಾಲಚಕ್ರಕ್ಕೆ ಸಂಬಂಧಿಸಿದೆ. ಆದುದರಿಂದ ಸೃಷ್ಟಿಯು ನವಚೇತನದಿಂದ ತುಂಬಿರುತ್ತದೆ. ಯುಗಾದಿ ಪಾಡ್ಯದಂದು ಪ್ರಾರಂಭವಾಗುವ ಹೊಸವರ್ಷದ ತುಲನೆಯನ್ನು ಸೂರ್ಯೋದಯಕ್ಕೆ ಉದಯವಾಗುವ ತೇಜೋಮಯ ದಿನದೊಂದಿಗೆ ಮಾಡಬಹುದು.
ಐತಿಹಾಸಿಕ ಕಾರಣಗಳು
ಈ ದಿನದಂದು ರಾಮನು ವಾಲಿಯನ್ನು ವಧಿಸಿದನು. ವಿಜಯದ ಪ್ರತೀಕವು ಎತ್ತರದಲ್ಲಿರುತ್ತದೆ. ಹಾಗಾಗಿ ಬ್ರಹ್ಮಧ್ವಜ ಎತ್ತರದಲ್ಲಿರುತ್ತದೆ. ಈ ದಿನದಿಂದಲೇ 'ಶಾಲಿವಾಹನ ಶಕೆ' ಪ್ರಾರಂಭವಾಯಿತು, ಏಕೆಂದರೆ ಈ ದಿನ ಶಾಲಿವಾಹನನು ಶತ್ರುಗಳ ಮೇಲೆ ವಿಜಯವನ್ನು ಪಡೆದನು.
ಆಧ್ಯಾತ್ಮಿಕ ಕಾರಣಗಳು
ಬ್ರಹ್ಮದೇವನು ಇದೇ ದಿನದಿಂದು ಸೃಷ್ಟಿಯನ್ನು ನಿರ್ಮಿಸಿದನು. ಅರ್ಥಾತ್ ಈ ದಿನ ಸತ್ಯಯುಗವು ಪ್ರಾರಂಭವಾಯಿತು. ಆದುದರಿಂದಲೇ ಈ ದಿನದಂದು ವರ್ಷಾರಂಭವನ್ನು ಮಾಡುತ್ತಾರೆ.
ಯುಗಾದಿಯಂದು ತೇಜ ಮತ್ತು ಪ್ರಜಾಪತಿ ಲಹರಿಗಳು ಹೆಚ್ಚಿನ ಪ್ರಮಾಣದಲ್ಲಿ ಕಾರ್ಯನಿರತವಾಗಿರುತ್ತವೆ. ಸೂರ್ಯೋದಯದ ಸಮಯದಲ್ಲಿ ಈ ಲಹರಿಗಳಿಂದ ಪ್ರಕ್ಷೇಪಿತವಾಗುವ ಚೈತನ್ಯವು ಹೆಚ್ಚಿನ ಸಮಯದವರೆಗೆ ಉಳಿಯುತ್ತದೆ. ಅದು ಜೀವದ ಜೀವಕೋಶಗಳಲ್ಲಿ ಸಂಗ್ರಹವಾಗುತ್ತದೆ ಹಾಗೂ ಅವಶ್ಯಕತೆಗನುಸಾರ ಆ ಜೀವದಿಂದ ಉಪಯೋಗಿಸಲ್ಪಡುತ್ತದೆ.
ಹಿಂದೂ ಸಂಸ್ಕೃತಿಯಲ್ಲಿ ಯುಗಾದಿಯು ಕೇವಲ ಹೊಸ ವರ್ಷದ ಆರಂಭವಾಗಿರದೇ, ಅದು ಅಧರ್ಮದ ಮೇಲೆ ಧರ್ಮದ ವಿಜಯದ ಸಂಕೇತವಾಗಿರುವ ಅತ್ಯಂತ ಶುಭ ದಿನವಾಗಿದೆ. ಪ್ರಭು ಶ್ರೀರಾಮನು 14 ವರ್ಷಗಳ ವನವಾಸವನ್ನು ಮುಗಿಸಿ, ಅಸುರಿ ಶಕ್ತಿಗಳನ್ನು ನಾಶ ಮಾಡಿ ಅಯೋಧ್ಯೆಗೆ ಮರಳಿದಾಗ, ಅಯೋಧ್ಯೆಯ ಭಕ್ತ ನಾಗರಿಕರು ಆನಂದ ಮತ್ತು ವಿಜಯದ ಸಂಕೇತವೆಂದು ಮನೆಮನೆಗಳ ಮೇಲೆ ಬ್ರಹ್ಮಧ್ವಜವನ್ನು ಏರಿಸಿದ್ದರು. ಅದೇ ವಿಜಯೋತ್ಸವ ಮತ್ತು ಅದೇ ಆದರ್ಶದ ಬ್ರಹ್ಮಧ್ವಜವು ಇಂದಿಗೂ ನಮಗೆ ನಿಜವಾದ ಅರ್ಥದಲ್ಲಿ 'ರಾಮರಾಜ್ಯ'ವನ್ನು ಸ್ಥಾಪಿಸಲು ಪ್ರೇರಣೆ ನೀಡುತ್ತಿದೆ. ರಾಮರಾಜ್ಯದಲ್ಲಿ ಮಾತ್ರ ನಿಜವಾದ ಸುಖ ಮತ್ತು ಆನಂದವನ್ನು ಅನುಭವಿಸಲು ಸಾಧ್ಯ.
ರಾಮರಾಜ್ಯ ಎಂದರೆ ಆಧ್ಯಾತ್ಮಿಕ ಶ್ರದ್ಧೆಯು ಉತ್ತಮ ಆಡಳಿತದಲ್ಲಿ ಪ್ರತಿಫಲಿಸುವಂತಹ ರಾಜ್ಯ. ಇಂದಿನ ಕಾಲದಲ್ಲೂ ಭಾರತದಲ್ಲಿ ಆದರ್ಶ ರಾಜ, ಸಾತ್ವಿಕ ಪ್ರಜೆಗಳು, ಉತ್ತಮ ಆಡಳಿತ ಮತ್ತು ಸುರಕ್ಷಿತವಾಗಿರುವ ರಾಮರಾಜ್ಯವನ್ನು ತರುವುದೇ ಕಾಲಾನುಸಾರ ನಿಜವಾದ ಧರ್ಮಸಂಸ್ಥಾಪನೆಯಾಗಿದೆ. ನಾಗರಿಕರು 'ಸಾಧಕರು' (ನಿತ್ಯ ಸಾಧನೆ ಮಾಡುವವರು ಅಥವಾ ಭಗವದ್ಭಕ್ತರು) ಆಗಿರುವುದೇ ರಾಮರಾಜ್ಯಕ್ಕಾಗಿ ಅರ್ಹತೆಯಾಗಿದೆ. ಸಮಾಜದ ವ್ಯಕ್ತಿಗಳು ಆಧ್ಯಾತ್ಮಿಕವಾಗಿ ಉನ್ನತ ಮತ್ತು ಧರ್ಮಸಂಸ್ಕಾರವಂತರಾದಾಗ ಮಾತ್ರವೇ ನಿಜವಾದ ಅರ್ಥದಲ್ಲಿ ಆದರ್ಶ ರಾಷ್ಟ್ರರಚನೆ ಸಾಕಾರಗೊಳ್ಳುತ್ತದೆ. ಯುಗಾದಿಯ ಈ ಶುಭ ಮುಹೂರ್ತದಲ್ಲಿ ನಾವು ಮನೆಯ ಹೊರಗೆ ಬ್ರಹ್ಮಧ್ವಜವನ್ನು ಏರಿಸುವುದರ ಜೊತೆಗೆ, ರಾಮರಾಜ್ಯದ ಸಿದ್ಧಾಂತದ ಮೇಲೆ ಆಧರಿಸಿದ ರಾಷ್ಟ್ರ ನಿರ್ಮಾಣಕ್ಕಾಗಿ ಕೊಡುಗೆ ನೀಡಲು ಮತ್ತು ಸಾಧನೆ ಮಾಡುವ ಸಂಕಲ್ಪ ಮಾಡೋಣ. ಭಾರತದಲ್ಲಿ ಮತ್ತೊಮ್ಮೆ 'ರಾಮರಾಜ್ಯ'ದ ಬ್ರಹ್ಮಧ್ವಜವನ್ನು ಏರಿಸಲು ಕಟಿಬದ್ಧರಾಗೋಣ !

ಟೀಕೆಗಳಿಗೆ ಕೆಲಸದ ಮೂಲಕವೇ ಉತ್ತರ : ಎಚ್.ಸಿ.ಬಾಲಕೃಷ್ಣ

ಬನ್ನಿಕುಪ್ಪೆ ಗ್ರಾಪಂ ವ್ಯಾಪ್ತಿಯಲ್ಲಿ 40 ಕೋಟಿ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ

ರಾಮನಗರ : ಗ್ಯಾರಂಟಿ ಯೋಜನೆಗಳಿಂದ ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿಲ್ಲ ಎಂಬ ವಿರೋಧಿಗಳ ಟೀಕೆಗಳಿಗೆ ಕೆಲಸದ ಮೂಲಕವೇ ಉತ್ತರ ನೀಡಲಾಗುತ್ತಿದೆ ಎಂದು ಶಾಸಕ ಎಚ್.ಸಿ.ಬಾಲಕೃಷ್ಣ ತಿಳಿಸಿದರು.

ಬಿಡದಿ ಹೋಬಳಿ ಬನ್ನಿಕುಪ್ಪೆ ಗ್ರಾಪಂ ವ್ಯಾಪ್ತಿಯ ವಿವಿಧ ಗ್ರಾಮಗಳಲ್ಲಿ ಸುಮಾರು 40 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆ/ಉದ್ಘಾಟನೆ ನೆರವೇರಿಸಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸರ್ಕಾರದಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಹಣದ ಕೊರತೆ ಇಲ್ಲ. ಗ್ಯಾರಂಟಿ ಯೋಜನೆಗಳ ಜತೆಜತೆಗೆ ಅಭಿವೃದ್ಧಿಯೂ ನಡೆಯುತ್ತಿದೆ. ಇದರಿಂದ ಹತಾಶರಾಗಿರುವ ವಿಪಕ್ಷಗಳ ಮುಖಂಡರು ಜನರ ದಿಕ್ಕುತಪ್ಪಿಸಲು ಸುಳ್ಳು ಹೇಳಿಕೆಗಳನ್ನು ನೀಡುತ್ತಿದ್ದಾರೆ ಎಂದರು.

ಬನ್ನಿಕುಪ್ಪೆ ಗ್ರಾಪಂ ವ್ಯಾಪ್ತಿಯಲ್ಲಿ 40 ಕೋಟಿ ವೆಚ್ಚದ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ. ರಸ್ತೆ, ಮೂಲಭೂತ ಸೌಕರ್ಯ ಸೇರಿದಂತೆ ವಿಶೇಷವಾಗಿ ಶುದ್ಧ ಕುಡಿಯುವ ನೀರಿನ ಘಟಕಗಳ ನಿರ್ಮಾಣಕ್ಕೆ ವಿಶೇಷ ಒತ್ತು ನೀಡಲಾಗಿದೆ. ವಂಡರ್ ಲಾ, ಟೊಯೋಟಾ ಕಂಪೆನಿಗಳ ಸಹಯೋಗದಲ್ಲಿ ಘಟಕಗಳನ್ನು ನಿರ್ಮಾಣ ಮಾಡಲಾಗುತ್ತಿದೆ ಎಂದು ಹೇಳಿದರು.

ಮೂರ್ನಾಕು ಬಾರಿ ಶಾಸಕರಾಗಿರುವವರು ಸುಮಾರು 40ಕ್ಕೂ ಹೆಚ್ಚು ಶಾಸಕರಿದ್ದೇವೆ. ಹಾಲಿ ಇರುವ 20 ಸಚಿವರನ್ನು ಬದಲಿಸಿ 20 ಮಂದಿ ಹೊಸ ಮುಖಗಳಿಗೆ ಅವಕಾಶ ನೀಡಿದರೆ ಮತ್ತಷ್ಟು ಹುಮ್ಮಸ್ಸಿನಿಂದ ಕೆಲಸ ಮಾಡುತ್ತಾರೆ. ಇದರಿಂದ ಪಕ್ಷಕ್ಕೆ ಮತ್ತಷ್ಟು ಒಳ್ಳೆ ಹೆಸರು ಬರುತ್ತದೆ. ಈ ಹಿನ್ನೆಲೆಯಲ್ಲಿ ರಾಜ್ಯ ನಾಯಕರ ಮೂಲಕ ಹೈಕಮಾಂಡ್‌ಗೆ ಮನವಿ ಸಲ್ಲಿಸಿದ್ದೇವೆ ಎಂದರು.



ನಮ್ಮ ಮನವಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಎರಡು ಕ್ಷೇತ್ರಗಳ ಉಪ ಚುನಾವಣೆ ನಂತರ ಹೈಕಮಾಂಡ್ ಗಮನಕ್ಕೆ ತಂದು ಅರ್ಹರಿಗೆ ಸಚಿವ ಸ್ಥಾನ ನೀಡುವ ಭರವಸೆ ನೀಡಿದ್ದಾರೆ ಎಂದು ತಿಳಿಸಿದರು.

ನಾಯಕತ್ವ ಬದಲಾವಣೆ ಆಗಬೇಕೆಂಬುದು ನಮ್ಮ ವ್ಯಾಪ್ತಿಯನ್ನು ಮೀರಿದ ವಿಚಾರ. ನಾಯಕತ್ವ ಬದಲಾಗಬೇಕೆ, ಬೇಡವೇ ಎಂಬುದನ್ನು ಹೈಕಮಾಂಡ್ ತೀರ್ಮಾನಿಸುತ್ತದೆ. ನಮಗೆ ಸಚಿವ ಸ್ಥಾನ ನೀಡಬೇಕೆಂಬುದು ಮಾತ್ರವೇ ನಮ್ಮ ಬೇಡಿಕೆಯಾಗಿದೆ ಎಂದು ಪ್ರಶ್ನೆಯೊಂದಕ್ಕೆ ಬಾಲಕೃಷ್ಣ ಪ್ರತಿಕ್ರಿಯಿಸಿದರು.

ಎರಡೂವರೆ ವರ್ಷದ ನಂತರ ಸಚಿವ ಸಂಪುಟ ಪುನರ್ ರಚನೆ ಮಾಡುವುದಾಗಿ ಈ ಹಿಂದೆಯೇ ಮಾತುಕತೆ ನಡೆದಿತ್ತು. ರಾಜ್ಯ ನಾಯಕರಿಗೆ ಇದೀಗ ಅದನ್ನು ಜ್ಞಾಪಿಸಿದ್ದೇವೆ. ಅದರಂತೆ ಸಚಿವ ಸ್ಥಾನ ಸಿಗುವ ಆಶಯವನ್ನು ಅವರು ವ್ಯಕ್ತಪಡಿಸಿದರು.

ಮೊದಲ ಬಾರಿ ಗೆದ್ದಿರುವ ಶಾಸಕರು ಮಂತ್ರಿ ಸ್ಥಾನಕ್ಕೂ ಮಿಗಿಲಾಗಿ ಹೆಚ್ಚಿನ ಅನುದಾನಕ್ಕೆ ಬೇಡಿಕೆ ಇಟ್ಟಿದ್ದಾರೆ. ಮಂತ್ರಿ ಸ್ಥಾನ ನೀಡಿದರೆ ಯಾರಾದರೂ ಬೇಡ ಎನ್ನುತ್ತಾರೆಯೇ ಎಂದ ಅವರು, ಮಂತ್ರಿ ಸ್ಥಾನ ನೀಡಲು ಕೆಲವೊಂದು ಮಾನದಂಡಗಳಿವೆ. ಅದರ ಪ್ರಕಾರ ಯಾರು ಅರ್ಹರೋ ಅವರಿಗೆ ಮಂತ್ರಿ ಸ್ಥಾನ ಸಿಗುವ ಭರವಸೆ ಇದೆ ಎಂದರು.

ಹೆಚ್ಚಿನ ಅನುದಾನ ಕೇಳುತ್ತಿದ್ದಾರೆಯೇ ಹೊರತು ಅನುದಾನವೇ ಬರುತ್ತಿಲ್ಲ ಎಂದಲ್ಲ. ಮೊದಲ ಬಾರಿ ಗೆದ್ದಿರುವವರು ಹೆಚ್ಚಿನ ಉತ್ಸಾಹದಲ್ಲಿದ್ದಾರೆ. ಕ್ಷೇತ್ರವನ್ನು ಮತ್ತಷ್ಟು ಅಭಿವೃದ್ಧಿ ಮಾಡಿ ಹಿಡಿತದಲ್ಲಿಟ್ಟುಕೊಂಡು, ಇನ್ನೂ ಮೂರ್ನಾಕು ಬಾರಿ ಶಾಸಕರಾಗಬೇಕೆಂಬ ಆಸೆ, ಆಕಾಂಕ್ಷೆ ಅವರಲ್ಲಿದೆ. ಹಾಗಾಗಿ ಹೆಚ್ಚಿನ ಅನುದಾನಕ್ಕೆ ಬೇಡಿಕೆ ಇಡುತ್ತಿದ್ದಾರೆ ಎಂದರು.

ನೀರಾವರಿ ವಿಚಾರವಾಗಿ ನಮ್ಮ ರಾಜ್ಯಕ್ಕೆ ಅನ್ಯಾಯವಾಗುತ್ತಿದೆ. ಅದನ್ನು ಸರಿಪಡಿಸಲು ಎಲ್ಲಾ ಪಕ್ಷಗಳ ಸಂಸದರ ನಿಯೋಗದೊಂದಿಗೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸಂಬಂಧಪಟ್ಟ ಕೇಂದ್ರ ಸಚಿವರನ್ನು ಭೇಟಿ ಮಾಡಿದ್ದಾರೆ. ಅಸ್ಸಾಂ ಚುನಾವಣಾ ಉಸ್ತುವಾರಿಯೂ ಆಗಿದ್ದಾರೆ. ಕೆಪಿಸಿಸಿ ಅಧ್ಯಕ್ಷರೂ ಆಗಿರುವುದರಿಂದ ಅವರು ಆಗಾಗ್ಗೆ ದೆಹಲಿಗೆ ಭೇಟಿ ನೀಡುತ್ತಿರುತ್ತಾರೆ. ಇದಕ್ಕೆ ಬೇರೆ ಅರ್ಥ ಕಲ್ಪಿಸುವುದು ಬೇಡ ಎಂದು ಹೇಳಿದರು.

ಬೀದರ್‌ನಿಂದ ಬೆಂಗಳೂರಿಗೆ

ವಿಶ್ವಕರ್ಮ ಸಮಾಜದಿಂದ ಪಾದಯಾತ್ರೆ



ರಾಮನಗರ ; ವಿಶ್ವಕರ್ಮ ಸಮಾಜಕ್ಕೆ ವಿಶೇಷವಾದ ಮೀಸಲಾತಿ ನೀಡಬೇಕೆಂದು ಒತ್ತಾಯಿಸಿ ಮುಂದಿನ ಮೂರು ತಿಂಗಳಿನೊಳಗೆ ಬೀದರ್‌ನಿಂದ ಬೆಂಗಳೂರಿಗೆ ವಿಶ್ವಕರ್ಮ ಸಮಾಜದ ಸಾವಿರಾರು ಜನರು ಪಾದಯಾತ್ರೆ ಮಾಡಲಿದ್ದೇವೆ. ಎಂದು ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ ರಾಜ್ಯ ಅಧ್ಯಕ್ಷ ವಿಧಾನ ಪರಿಷತ್ ಮಾಜಿ ಸದಸ್ಯ ಕೆ.ಪಿ.ನಂಜುಂಡಿ ಅವರು ತಿಳಿಸಿದರು.

ನಗರದ ಲಕ್ಷ್ಮೀ ಆರ್. ಗೋಲ್ಡ್ ಪ್ಯಾಲೇಸ್‌ನಲ್ಲಿ ಅವರು ಸುದ್ದಿಗಾರರೊಂದಿಗೆ ಮಾತನಾಡಿ, ರಾಜ್ಯದಲ್ಲಿ ವಿಶ್ವಕರ್ಮ ಸಮಾಜದ ಜನರು ಚಿನ್ನ-ಬೆಳ್ಳಿ ಕೆಲಸ, ಮರಗೆಲಸ, ಕಬ್ಬಿಣದ ಕೆಲಸ, ಕಂಚಿನ ಕೆಲಸ, ಶಿಲ್ಪಿಗಳಾಗಿ ಈ ಐದು ಪ್ರಮುಖ ಕೆಲಸಗಳ ಮೂಲಕ ಬದುಕನ್ನು ಕಟ್ಟಿಕೊಂಡಿದ್ದಾರೆ. ಈ ಸಮಾಜವು ಇಡೀ ಕರ್ನಾಟಕ ರಾಜ್ಯದಾದ್ಯಂತ 40 ಲಕ್ಷಕ್ಕೂ ಅಧಿಕ ಜನಸಂಖ್ಯೆಯು ಹರಡಿಕೊಂಡಿದೆ. ಈ ಜನಸಂಖ್ಯೆಯೊಳಗೆ ದೇಶದಾದ್ಯಂತ ವಿಶ್ವಕರ್ಮ ಸಮಾಜದವರು ತಮಿಳು, ಹಿಂದಿ, ತೆಲುಗು ಭಾಷೆ ಮಾತನಾಡುವವರು ಬೆಂಗಳೂರಿಗೆ ಬಂದು ನೆಲೆ ಕಂಡುಕೊಂಡಿದ್ದಾರೆ. ತಮ್ಮ ವೃತ್ತಿ ಬಿಟ್ಟರೆ ಈ ಶೋಷಿತ ಸಮಾಜಕ್ಕೆ ರಾಜಕೀಯ ಪ್ರಜ್ಞೆಯೇ ಇಲ್ಲ ಎಂದರು.

ನಾನು ಈ ಸಮಾಜದ ನ್ಯಾಯಕ್ಕಾಗಿ ಕಳೆದ 25 ವರ್ಷಗಳಿಂದ ಹೋರಾಟವನ್ನು ಮಾಡುತ್ತಿದ್ದರೂ ಸರ್ಕಾರದಿಂದ ಇದುವರೆವಿಗೂ ಯಾವುದೇ ರಾಜಕೀಯ, ಸಾಂಸ್ಕೃತಿಕ, ಶೈಕ್ಷಣಿಕವಾದ ಸಾಮಾಜಿಕ ನ್ಯಾಯ ಸಿಕ್ಕಿಲ್ಲ. ಈ ಸಮಾಜದ ಕುಲಕಸುಬು ಬೆಳೆಯಬೇಕು, ನಮ್ಮ ಮಕ್ಕಳು ವಿದ್ಯಾವಂತರಾಗಬೇಕಾಗಿದೆ. ಅವರಿಗೆ ಉದ್ಯೋಗ ಸಿಗಬೇಕು ಎಂದು ನಾನು ಲಕ್ಷಾಂತರ ಕಿ.ಮೀ. ಪಾದಯಾತ್ರೆಯಲ್ಲಿ ಸರ್ಕಾರದ ಗಮನ ಸೆಳೆಯಲು ಹೋರಾಟ ಮಾಡುತ್ತಾ ಬಂದಿದ್ದೇನೆ. ಇದರ ಜೊತೆಗೆ ವಿಶ್ವಕರ್ಮ ಜಯಂತಿ, ಅಮರಶಿಲ್ಪಿ ಸಂಸ್ಮರಣ ದಿನಾಚರಣೆ, ವಿಶ್ವಕರ್ಮ ಅಭಿವೃದ್ಧಿ ನಿಗಮ, ಕುಲಶಾಸ್ತ್ರ ಅಧ್ಯಯನಕ್ಕೆ ಸರ್ಕಾರದಿಂದ ಆದೇಶ ಮಾಡಿಸಿದ್ದೇನೆ. ಆದರೂ ಸರ್ಕಾರ ಸಮಾಜವನ್ನು ನಿರ್ಲಕ್ಷ್ಯದಿಂದಲೇ ಕಂಡಿದೆ ಎಂದರು.

ಡಾ.ಬಿ.ಆರ್.ಅಂಬೇಡ್ಕರ್ ಅವರು ಹೇಳಿದಂತೆ ಸಂವಿಧಾನದಲ್ಲಿರುವ ಅವಕಾಶಗಳನ್ನು ಬಳಸಿಕೊಂಡು ನಮ್ಮಂತಹ ಶೋಷಿತ ಸಮಾಜಗಳು ಹಕ್ಕುಗಳಿಗಾಗಿ ಹೋರಾಟಗಳ ಮೂಲಕ ಪಡೆದು ನಮ್ಮ ಕುಲಕಸಬುಗಳನ್ನು ಉಳಿಸಿಕೊಳ್ಳಬೇಕೆಂಬ ವಿಚಾರ ನಮ್ಮ ಸಮಾಜದವರಿಗೆ ತಿಳಿದಿಲ್ಲ. 40 ಲಕ್ಷ ಇರುವ ಸಮಾಜದ ಒಟ್ಟು ಜನಸಂಖ್ಯೆಯನ್ನು ಸಮೀಕ್ಷೆಯ ಮೂಲಕ ವರದಿ ತರಿಸಿಕೊಂಡು 8 ಲಕ್ಷ ಮಾತ್ರ ಸಮಾಜದ ಜನಸಂಖ್ಯೆ ಇದೆ ಎನ್ನುತ್ತದೆ ಸರ್ಕಾರ. ಈ ಕಾರಣದಿಂದ ನಾವು ಯಾವುದೇ ಚುನಾವಣೆಯಲ್ಲಿ ಸ್ಪರ್ಧಿಸುವುದರಿಂದ ವಂಚಿತರಾಗಿದ್ದೇವೆ. 25 ವರ್ಷಗಳ ಸತತ ಹೋರಾಟದಿಂದ ಸಮಾಜಕ್ಕೆ ಯಾವುದೇ ಪ್ರಯೋಜನವಾಗಿಲ್ಲ. ಯಾರೂ ಬೆಳೆಸಲೂ ಇಲ್ಲ. ಎಸ್.ಟಿ. ಮತ್ತು ಹಿಂದುಳಿದ ವರ್ಗಗಳು ಸಹೋದರರಿದ್ದಂತೆ. ಇಲ್ಲಿ ಸಮಾಜದವರಿಗೆ ಅವಕಾಶ ಕಲ್ಪಿಸಿಕೊಡಬೇಕೆಂಬುದು ನಮ್ಮ ಪ್ರಮುಖವಾದ ಬೇಡಿಕೆಯಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ವಿಶ್ವಕರ್ಮ ಸಮಾಜದ ರಾಜ್ಯ ಉಪಾಧ್ಯಕ್ಷ ಬಸವರಾಜು, ಬೆಂಗಳೂರು ದಕ್ಷಿಣ ಜಿಲ್ಲೆ ವಿಶ್ವಕರ್ಮ ಸಮಾಜದ ಬಿಡದಿ ಹೋಬಳಿ ಅಧ್ಯಕ್ಷ ಕುಮಾರ್, ಯುವ ಘಟಕದ ಅಧ್ಯಕ್ಷ ಜನಾರ್ಧನ್, ಬಿಡದಿ ಅಧ್ಯಕ್ಷ ನಿಂಗರಾಜು, ಬೈರಮಂಗಲ ಅಧ್ಯಕ್ಷ ಸಿದ್ದರಾಜು, ಬನ್ನಿಕುಪ್ಪೆ ಅಧ್ಯಕ್ಷ ರಾಮಾಚಾರ್, ರವಿಪ್ರಕಾಶ್, ಕುಮಾರ್ ಕರೇನಹಳ್ಳಿ, ಲಕ್ಷ್ಮೀನಾರಾಯಣ್, ಸೋಮನಹಳ್ಳಿ ರಾಜೇಶ್, ಜನಾರ್ಧನ್ ಇನ್ನು ಮುಂತಾದವರು ಇದ್ದರು.

ರೈಲ್ವೆ ರಿಟ್ರ್ಯೂಟ್ ಮೆಂಟ್ ಬೋರ್ಡ್ ಪರೀಕ್ಷೆಗಳಲ್ಲಿ ಪ್ರಾದೇಶಿಕ ಭಾಷೆಗಳಲ್ಲಿ ಪರೀಕ್ಷೆ ಬರೆಯಲು ಅವಕಾಶ:

ತುಮಕೂರು- ರೈಲ್ವೆ ರಿಟ್ರ್ಯೂಟ್ ಮೆಂಟ್ ಬೋರ್ಡ್ ಪರೀಕ್ಷೆಗಳಲ್ಲಿ ಕನ್ನಡ ಸೇರಿದಂತೆ ಪ್ರಾದೇಶಿಕ ಭಾಷೆಗಳಲ್ಲಿ ಪರೀಕ್ಷೆ ಬರೆಯಲು ಅವಕಾಶ ನೀಡುದ ಕೇಂದ್ರ ಸರಕಾರದ ಕ್ರಮವನ್ನು ಖಂಡಿಸಿ, ಇಂದು ಸಂಜೆ ನಡೆಯುವ ಕರ್ನಾಟಕದ ಸಂಸದರ ಸಭೆಯಲ್ಲಿ ಮನವಿ ಸಲ್ಲಿಸಲಾಗುವುದು ಎಂದು ಕೆಪಿಸಿಸಿ ಉಪಾಧ್ಯಕ್ಷರು ಹಾಗೂ ಕೌಶಲ್ಯಾಭಿವೃದ್ಧಿ ಮಂಡಳಿ ಮಾಜಿ ಅಧ್ಯಕ್ಷ ಮುರುಳೀಧರ ಹಾಲಪ್ಪ ತಿಳಿಸಿದ್ದಾರೆ

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಿನ್ನೆ,ಮೊನ್ನೆಯವರೆಗೂ ಕನ್ನಡದಲ್ಲಿ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸುವ ಭರವಸೆ ನೀಡಿದ್ದ, ರೈಲ್ವೆ ನೇಮಕಾತಿ ಮಂಡಳಿ, ಹೊರಡಿಸಿರುವ ಅಧಿಸೂಚನೆಯಲ್ಲಿ ಪರೀಕ್ಷೆ ಬರೆಯಲು ಹಿಂದಿ ಮತ್ತು ಇಂಗ್ಲಿಷ್ ಭಾಷೆಗೆ ಮಾತ್ರ ಅವಕಾಶ ಕಲ್ಪಿಸಿ, ಉಳಿದ ಪ್ರಾದೇಶಿಕ ಭಾಷೆಗಳನ್ನು ಪರಿಗಣೆಗೆ ತೆಗೆದುಕೊಂಡಿಲ್ಲ. ಕರ್ನಾಟಕ ಸೇರಿದಂತೆ ಹಲವು ರಾಜ್ಯಗಳ ಉದ್ಯೋಗಾಂಕ್ಷಿಗಳಿಗೆ ಬರಸಿಡಿಲು ಬಡಿದಂತಾಗಿದೆ. ಕೇಂದ್ರ ಸರಕಾರದ ಮಲತಾಯಿ ಧೋರಣೆ ವಿರುದ್ದ ಧ್ವನಿ ಎತ್ತುವಂತೆ ದೆಹಲಿಯಲ್ಲಿ ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿಗಳ ನೇತೃತ್ವದಲ್ಲಿ ನಡೆಯುವ ರಾಜ್ಯ ಸಂಸದರ ಸಭೆಯಲ್ಲಿ ಮನವಿ ಮಾಡುವುದಲ್ಲದೆ, ರೈಲ್ವೆ ಸಚಿವರಾದ ಅಶ್ವಿನ್ ಶ್ರೀ ವೈಷ್ಣವ್ ಅವರಿಗೆ ಮನವಿ ಮಾಡಲಾಗುವುದು ಎಂದು ಹಾಲಪ್ಪ ನುಡಿದರು.

ದೇಶದಲ್ಲಿಯೇ ಅತಿ ಹೆಚ್ಚು ನೇಮಕಾತಿ ಮಾಡಿಕೊಳ್ಳುವ ಇಲಾಖೆಗಳಲ್ಲಿ ರೈಲ್ವೆ ಕೂಡ ಒಂದು, ಪ್ರಸ್ತುತ ರೈಲ್ವೆಯಲ್ಲಿ 13 ಲಕ್ಷ ನೌಕರರಿದ್ದು, ಇವರಲ್ಲಿ 11 ಲಕ್ಷ ಹಿಂದಿ ಭಾಷಿಕರು, ಇತರೆ ಭಾಷೆಯ ಯುವಕರಿಗೆ ಅತ್ಯಂತ ಕಡಿಮೆ ಅದ್ಯತೆ ಇದೆ. ಭಾರತದ ಸಂವಿಧಾನದಲ್ಲಿ 22 ಭಾಷೆಗಳಿಗೆ ಮಾನ್ಯತೆ ಇದೆ. ಆದರೆ ಎರಡು ಭಾಷೆಗಳಲ್ಲಿ ಮಾತ್ರ ಪರೀಕ್ಷೆ ಬರೆಯಲು ಅವಕಾಶ ನೀಡಿರುವುದು ಸಂವಿಧಾನಬಾಹಿರ ಕೆಲಸವಾಗಿದೆ. ಹಾಗಾಗಿ ಕೂಡಲೆ ಆರ್.ಆರ್.ಬಿ. ಅಧಿಸೂಚನೆ ಹಿಂಪಡೆದು, ಎಲ್ಲಾ ಪ್ರಾದೇಶಿಕ ಭಾಷೆಗಳಿಗೆ ಅವಕಾಶ ಕಲ್ಪಿಸಿದ ಹೊಸ ಅಧಿಸೂಚನೆ ಹೊರಡಿಸಬೇಕೆಂಬುದು ಕನ್ನಡಪರ ಸಂಘಟನೆಗಳು ಹಾಗು ದ್ರಾವಿಡ ಭಾಷೆಗಳ ಒತ್ತಾಯವಾಗಿದೆ.ಕೇಂದ್ರ ಸರಕಾರ ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳದಿದ್ದರೆ ಮುಂಬರುವ ಐದು ರಾಜ್ಯಗಳ ಚುನಾವಣೆಯಲ್ಲಿ ಬಿಜೆಪಿಗೆ ತಕ್ಕ ಪಾಠ ಕಲಿಸಲಿದ್ದಾರೆ ಎಂದು ಹಾಲಪ್ಪ ತಿಳಿಸಿದರು.



ತುಮಕೂರು ಸಂಸದರು, ಕೇಂದ್ರದ ರೈಲ್ವೆ ಖಾತೆ ರಾಜ್ಯ ಸಚಿವರಾದ ವಿ.ಸೋಮಣ್ಣ ಸಾಕಷ್ಟು ಕನ್ನಡ ಭಾಷೆಯಲ್ಲಿ ರೈಲ್ವೆ ನೇಮಕಾತಿ ಪರೀಕ್ಷೆ ಬರೆಯುವ ಸಂಬಂಧಿಸಿದಂತೆ ಸಾಕಷ್ಟು ಪತ್ರ ವ್ಯವಹಾರ ನಡೆಸಿದ್ದಾರೆ. ಆದರೆ ಅವರ ಪ್ರಯತ್ನ ಕೈಗೂಡಿಲ್ಲ. ಕೇಂದ್ರದ ಮೌಖಿಕ ಭರವಸೆಯಿಂದ ಆಯಾಯ ಪ್ರಾದೇಶಿಕ ಭಾಷೆಯಲ್ಲಿ ಪರೀಕ್ಷೆಗೆ ಸಿದ್ದತೆ ನಡೆಸಿದ್ದ ಕರ್ನಾಟಕ ರಾಜ್ಯದ 1.80 ಲಕ್ಷ ಆಕಾಂಕ್ಷಿಗಳು ದಿಕ್ಕು ತೋಚದಂತಾಗಿದ್ದಾರೆ.ಹಾಗಾಗಿ ಕೇಂದ್ರ ರೈಲ್ವೆ ನೇಮಕಾತಿ ಮಂಡಳಿ ಮತ್ತೊಮ್ಮೆ ಪರಿಶೀಲನೆ ನಡೆಸಬೇಕೆಂಬುದು ಎಲ್ಲಾ ಕನ್ನಡಿಗರ ಆಗ್ರಹವಾಗಿದೆ ಎಂದರು.

ಕೇಂದ್ರ ಸರಕಾರಕ್ಕೆ ದ್ರಾವಿಡ ಭಾಷೆಗಳ ಮೇಲೆ ಮೊದಲಿನಿಂದಲು ಮಲತಾಯಿ ಧೋರಣೆ, ಇದುವರೆಗೂ ಕನ್ನಡದಲ್ಲಿ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸುವ ಭರವಸೆ ನೀಡಿ, ಈಗ ಹಿಂದಿ ಮತ್ತು ಇಂಗ್ಲಿಷ್ ಭಾಷೆಯಲ್ಲಿ ಮಾತ್ರ ಅವಕಾಶ ನೀಡಿ ಕನ್ನಡಿಗರ ತಲೆಯ ಮೇಲೆ ಚಪ್ಪಡಿ ಕಲ್ಲು ಎಳೆದಿದೆ. ಈ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ನಡೆಯುವ ರಾಜ್ಯದ ಸಂಸದರ ಸಭೆಯಲ್ಲಿ ಮನವಿ ಮಾಡಿ, ಸರಕಾರದ ಮೇಲೆ ಕನ್ನಡ ಭಾಷೆಗೆ ಅವಕಾಶ ನೀಡಲು ಒತ್ತಡ ತರುವಂತೆ ಕೋರಲಾಗುವುದು ಎಂದರು. ದೆಹಲಿಗೆ ರಾಜ್ಯದ ಪತ್ರಿ ಜಿಲ್ಲೆಯಿಂದ ಒಬ್ಬರಂತೆ ಹಾಗು ಕನ್ನಡ ಪರ ಅಂಘಟನೆಗಳ ಮುಖಂಡರು ನಿಯೋಗದಲ್ಲಿ ತೆರಳಿ ಮನವಿ ಸಲ್ಲಿಸಲಿದ್ದೇವೆ. ಸರಕಾರ ಸ್ಪಂದಿಸದಿದ್ದರೆ, ಕೇರಳ, ತಮಿಳುನಾಡು, ಪುದುಚೇರಿ ಚುನಾವಣೆಗಳಲ್ಲಿ ಜನರು ತಕ್ಕ ಪಾಠ ಕಲಿಸಲಿದ್ದಾರೆ ಎಂದು ಮುರುಳೀಧರ ಹಾಲಪ್ಪ ನುಡಿದರು

ಎಸ್.ಎಸ್.ಎಲ್.ಸಿ. ಪರೀಕ್ಷಾ ಕೇಂದ್ರಗಳಿಗೆ ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಭೇಟಿ : ಪರೀಕ್ಷೆ ಬರೆಯುತ್ತಿರುವ ಮಕ್ಕಳಿಗೆ ಶುಭ ಹಾರೈಕೆ

ತುಮಕೂರು: ರಾಜ್ಯದಾದ್ಯಂತ ಇಂದಿನಿಂದ ಆರಂಭವಾಗಿರುವ ಎಸ್.ಎಸ್.ಎಲ್.ಸಿ. ಪರೀಕ್ಷೆ-1ರ ಅಂಗವಾಗಿ ತುಮಕೂರು ನಗರದ ಎಂಪ್ರೆಸ್ ಕಾಲೇಜು, ಕಾಳಿದಾಸ ಪ್ರೌಢಶಾಲೆ ಸೇರಿದಂತೆ ವಿವಿಧ ಪರೀಕ್ಷಾ ಕೇಂದ್ರಗಳಿಗೆ ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಬುಧವಾರ ಭೇಟಿ ನೀಡಿ ಪರಿಶೀಲಿಸಿದರು.

ಬೆಳಿಗ್ಗೆ 8 ಗಂಟೆಯಿಂದಲೇ ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರಗಳಿಗೆ ಬಂದು ತಮ್ಮ ತಮ್ಮ ನೋಂದಣಿ ಸಂಖ್ಯೆ ಮತ್ತು ಕೊಠಡಿಗಳನ್ನು ಹುಡುಕಿಕೊಂಡು ಪರೀಕ್ಷೆ ಬರೆಯಲು ಉತ್ಸಾಹದಿಂದಿರುವ ವಿದ್ಯಾರ್ಥಿಗಳನ್ನು ನೋಡಿದ ಜಿಲ್ಲಾಧಿಕಾರಿಗಳು, ಎಸ್.ಎಸ್.ಎಲ್.ಸಿ. ಪರೀಕ್ಷೆ ಜೀವನದ ಕೊನೆ ಪರೀಕ್ಷೆ ಅಲ್ಲ, ಶಾಲೆಯಲ್ಲಿ ಕೇಳಿದ ಪಾಠ ಮತ್ತು ಓದಿರುವುದನ್ನು ನೆನಪಿನಲ್ಲಿಟ್ಟುಕೊಂಡು ಪರೀಕ್ಷೆಯನ್ನು ಉತ್ತಮವಾಗಿ ಬರೆಯಬೇಕು. ಎಸ್.ಎಸ್.ಎಲ್.ಸಿ. ಪರೀಕ್ಷೆಯು ಮೂರು ಬಾರಿ ನಡೆಯಲಿದೆ. ಹಾಗಾಗಿ ವಿದ್ಯಾರ್ಥಿಗಳು ಯಾವುದೇ ರೀತಿಯ ಆತಂಕ, ಭಯಕ್ಕೆ ಒಳಗಾಗದೆ ನಿರಾಳವಾಗಿ ಪರೀಕ್ಷೆ ಬರೆಯಬೇಕು ಎಂದು ಹೇಳುತ್ತಾ ಪರೀಕ್ಷೆ ಬರೆಯುತ್ತಿರುವ ಎಲ್ಲಾ ಮಕ್ಕಳಿಗೂ ಶುಭವಾಗಲಿ ಎಂದು ಹಾರೈಸಿದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಜಿಲ್ಲಾಧಿಕಾರಿಗಳು, ವಿದ್ಯಾರ್ಥಿಗಳ ಪ್ರಮುಖ ಘಟ್ಟವೆಂದೇ ಹೇಳಲಾಗುವ ಎಸ್.ಎಸ್.ಎಲ್.ಸಿ. ಪರೀಕ್ಷೆ-1 ಜಿಲ್ಲೆಯಲ್ಲಿ ಇಂದಿನಿಂದ ಆರಂಭವಾಗಿದ್ದು, ಜಿಲ್ಲೆಯಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆಯನ್ನು ಯಾವುದೇ ಲೋಪದೋಷವಿಲ್ಲದಂತೆ ಸುಸೂತ್ರವಾಗಿ ನಡೆಸಿದ್ದು, ಎಸ್.ಎಸ್.ಎಲ್.ಸಿ. ಪರೀಕ್ಷೆಯನ್ನೂ ಕೂಡ ಅದೇ ರೀತಿ ನಡೆಸಲು ಸಕಲ ಸಿದ್ಧತೆಯನ್ನು ಮಾಡಲಾಗಿದೆ ಎಂದರು.



ತುಮಕೂರು ಶೈಕ್ಷಣಿಕ ಹಾಗೂ ಮಧುಗಿರಿ ಶೈಕ್ಷಣಿಕ ಜಿಲ್ಲೆಯಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯು ಇಂದಿನಿಂದ ಏಪ್ರಿಲ್ 2ರವರೆಗೆ ಒಟ್ಟು 131 ಪರೀಕ್ಷಾ ಕೇಂದ್ರಗಳಲ್ಲಿ ನಡೆಯಲಿದ್ದು, ಒಟ್ಟು 37,130 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ. ತುಮಕೂರು(ದ) ಶೈಕ್ಷಣಿಕ ಜಿಲ್ಲೆಯ 82 ಪರೀಕ್ಷಾ ಕೇಂದ್ರಗಳಲ್ಲಿ 23,693 ವಿದ್ಯಾರ್ಥಿಗಳು, ಮಧುಗಿರಿ ಶೈಕ್ಷಣಿಕ ಜಿಲ್ಲೆಯ 49 ಪರೀಕ್ಷಾ ಕೇಂದ್ರಗಳಲ್ಲಿ 13,437 ವಿದ್ಯಾರ್ಥಿಗಳು ಪರೀಕ್ಷೆಗೆ ಬರೆಯಲಿದ್ದು, ಪರೀಕ್ಷಾ ಕೇಂದ್ರಗಳಲ್ಲಿ ವಿದ್ಯಾರ್ಥಿಗಳಿಗೆ ಅಗತ್ಯ ಸೌಲಭ್ಯಗಳನ್ನು ಒದಗಿಸಲಾಗಿದೆ ಎಂದು ತಿಳಿಸಿದರು.



ಪರೀಕ್ಷಾ ಕೇಂದ್ರಗಳ ಎಲ್ಲಾ ಕೊಠಡಿಗಳಿಗೆ ಸಿಸಿ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ನಡೆಯುತ್ತಿರುವ ಪರೀಕ್ಷೆಯನ್ನು ವೀಕ್ಷಣೆ ಮಾಡಲು ವೆಬ್‌ಕಾಸ್ಟಿಂಗ್ ವ್ಯವಸ್ಥೆ ಸಹ ಮಾಡಲಾಗಿದೆ. ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಡೆಸ್ಕ್, ಕುಡಿಯುವ ನೀರಿನ ಸೌಲಭ್ಯ, ಶೌಚಾಲಯ ವ್ಯವಸ್ಥೆ ಹಾಗೂ ವಿದ್ಯುತ್ ಸೌಲಭ್ಯ ಸೇರಿದಂತೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲಾಗಿದೆ ಎಂದರು.

ಎಲ್ಲಾ ಪರೀಕ್ಷಾ ಕೇಂದ್ರಗಳ ಸುತ್ತಮುತ್ತ 200 ಮೀಟರ್ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ಪರೀಕ್ಷಾ ಕೇಂದ್ರಗಳ ಸಮೀಪದಲ್ಲಿರುವ ಜೆರಾಕ್ಸ್ ಸೆಂಟರ್, ಸೈಬರ್ ಸೆಂಟರ್‌ಗಳನ್ನು ಮುಚ್ಚಲು ಆದೇಶಿಸಲಾಗಿದೆ ಎಂದು ಅವರು ಹೇಳಿದರು.

ಎಸ್.ಎಸ್.ಎಲ್.ಸಿ ಪರೀಕ್ಷಾ ಕೇಂದ್ರಕ್ಕೆ ಜಿಪಂ ಸಿಇಒ ಭೇಟಿ, ಪರಿಶೀಲನೆ



ತುಮಕೂರು: ಎಸ್‌ಎಸ್‌ಎಲ್‌ಸಿ ಪರೀಕ್ಷೆಹಿನ್ನೆಲೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅಶ್ವಿಜಾ ಬಿ.ವಿ ಅವರು ನಗರದ ಶ್ರೀ ಸಿದ್ದಗಂಗಾ ಸಂಯುಕ್ತ ಪದವಿ ಪೂರ್ವ ಕಾಲೇಜು ಪ್ರೌಢಶಾಲಾ ವಿಭಾಗಕ್ಕೆ ಭೇಟಿ ನೀಡಿ ಪರಿಶೀಲಿಸಿದರು.ಪರೀಕ್ಷೆಯ ಮೊದಲ ದಿನ ಬುಧವಾರ ಕನ್ನಡ ಪರೀಕ್ಷೆಯು ನಡೆಯುತ್ತಿದ್ದು, ಪರೀಕ್ಷಾ ಕೊಠಡಿಗಳಿಗೆ ಭೇಟಿ ನೀಡಿ ಪರಿಶೀಲಿಸಿದ ಅವರು, ಪರೀಕ್ಷಾರ್ಥಿಗಳಿಗೆ ಕುಡಿಯುವ ನೀರು, ಗಾಳಿ, ಬೆಳಕು ಸೇರಿದಂತೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವಂತೆ ತಿಳಿಸಿದರು.ಪರೀಕ್ಷಾ ಕಣ್ಗಾವಲು ಕೇಂದ್ರಕ್ಕೆಭೇಟಿ ನೀಡಿ ಪರೀಕ್ಷೆ ಬರೆಯುತ್ತಿರುವ ಮಕ್ಕಳಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳಲು ಅಧಿಕಾರಿಗಳು, ಶಿಕ್ಷಕರು ಮತ್ತು ಸಿಬ್ಬಂದಿಗಳಿಗೆ ತಿಳಿಸಿದರು. ಈ ಸಂದರ್ಭದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಹನುಮಂತಪ್ಪ ಸೇರಿದಂತೆ ಇತರೆ ಅಧಿಕಾರಿ ಮತ್ತು ಸಿಬ್ಬಂದಿಗಳು ಉಪಸ್ಥಿತರಿದ್ದರು.

ಎಸ್‌ಎಸ್‌ಐಟಿ ಕಾಲೇಜಿನ ಸಾಂಸ್ಕೃತಿಕ ಹಬ್ಬ ಕಲೋತ್ಸವಕ್ಕೆ ಚಾಲನೆ

ತುಮಕೂರು:ಶ್ರೀ ಸಿದ್ಧಾರ್ಥ ತಾಂತ್ರಿಕ ಮಹಾವಿದ್ಯಾಲಯದ ಸಾಂಸ್ಕೃತಿಕ ಹಬ್ಬ ಕಲೋತ್ಸವ – 2026 ಕ್ಕೆ ಈಗಾಗಲೇ ವೇದಿಕೆ ಸಜ್ಜಾಗಿದ್ದು ಈ ಸಾಂಸ್ಕೃತಿಕ ಹಬ್ಬಕ್ಕೆ ಸಾಹೇ ವಿಶ್ವ ವಿದ್ಯಾಲಯದ ಉಪಕುಲಪತಿಗಳಾದ ಡಾ.ಕೆ.ಬಿ ಲಿಂಗೇಗೌಡರವರು ಕಲೋತ್ಸವ – 2026ರ ಲೋಗೋವನ್ನು ಬಿಡುಗಡೆಗೊಳಿಸುವುದರ ಮೂಲಕ ಚಾಲನೆಯನ್ನು ನೀಡಿದರು.

ನಗರದ ಎಸ್‌ಎಸ್‌ಐಟಿ ಕಾಲೇಜ್‌ನ ಸರ್. ಎಂ.ವಿ. ಬ್ಲಾಕ್‌ನ ಆವರಣದಲ್ಲಿ ಕಲೋತ್ಸವ 2026ರ ಲೋಗೋ ಲಾಂಚ್ ಮಾಡಿ ಮಾತನಾಡಿದ ಅವರು ಕಲೋತ್ಸವ ಎಂಬ ಹೆಸರು ಎಸ್‌ಎಸ್‌ಐಟಿ ಕಾಲೇಜಿನ ಬ್ರಾಂಡ್ ಆಗಿದ್ದು ಈ ಕಾರ್ಯಕ್ರಮ ಕ್ಯಾಂಪಸ್ ನ ಒಂದು ಬಹುದೊಡ್ಡ ಸಾಂಸ್ಕೃತಿಕ ಹಬ್ಬವಾಗಿದೆ. ಈ ಕಾರ್ಯಕ್ರಮದಲ್ಲಿ ಕಾಲೇಜಿನ ಎರಡು ತಂಡಗಳಾದ ಐಕ್ಯ ಮತ್ತು ಸಂಸ್ಕೃತಿ ತಂಡಗಳ ಸ್ಪರ್ಧೆ ಎಂಥವರನ್ನೂ ರೋಮಾಂಚನಗೊಳಿಸುತ್ತದೆ. ಪ್ರತಿಯೊಬ್ಬರೂ ಈ ಕಲೋತ್ಸವ 2026 ಕಾರ್ಯಕ್ರಮದಲ್ಲಿ ಭಾಗವಹಿಸಿ ತಮ್ಮ ಪ್ರತಿಭೆಯ ಅನಾವರಣಗೊಳಿಸಿ ಎಂದು ಹೇಳಿದರು.

ಎಸ್ ಎಸ್ ಐಟಿ ಕಾಲೇಜಿನ ಪ್ರಾಂಶುಪಾಲ ಡಾ. ಮಹಾಂತೇಶ್ ಎಂ. ನಡಕಟ್ಟಿ ಮಾತನಾಡಿ ಕಲೋತ್ಸವ ವಿದ್ಯಾಥಿಗಳ ಪ್ರತಿಭಾ ಪ್ರದರ್ಶನಕ್ಕೆ ನಡೆಸಲಾಗುವ ಕಾರ್ಯಕ್ರಮ. ಈ ಕಾರ್ಯಕ್ರಮದಲ್ಲಿ ಪ್ರತಿಯೊಬ್ಬರು ಪಾಲ್ಗೊಂಡು ತಮ್ಮ ಪ್ರತಿಭೆಯ ಪ್ರದರ್ಶನವನ್ನು ಮಾಡುವುದರ ಮೂಲಕ ಕಾರ್ಯಕ್ರಮದ ಕಳೆಯನ್ನು ಹೆಚ್ಚಿಸಿ ಎಂದು ತಿಳಿಸಿದರು.



ಈ ಸಂದರ್ಭದಲ್ಲಿ ಕಲೋತ್ಸವ 2026ರ ಪೋಸ್ಟರ್ ಬಿಡುಗಡೆಗೊಳಿಸುವುದರ ಜೊತೆಗೆ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಟ್ರೋಫಿ ಕಫ್ ಅನ್ನು ಬಿಡುಗಡೆ ಮಾಡಿದರು.

ಈ ವೇಳೆ ವಿದ್ಯಾರ್ಥಿಗಳಿಂದ ನೃತ್ಯ, ಸಂಗೀತ, ಫ್ಯಾಷನ್, ಶೋಗಳ ಒಂದು ಝಲಕ್ ಅನ್ನು ಕಾಲೇಜಿನ ಎರಡೂ ತಂಡಗಳು ಪ್ರದರ್ಶಿಸಿ ಗಮನ ಸೆಳೆದರು.

ಕಲೋತ್ಸವ 2026ರ ಮಾರ್ಚ್ ತಿಂಗಳ 27 ಮತ್ತು 28 ರಂದು ಅದ್ದೂರಿಯಾಗಿ ನಡೆಯಲಿದ್ದು, ಈಗಾಗಲೇ ಈ ಕಾರ್ಯಕ್ರಮಕ್ಕೆ ಸಕಲ ಸಿದ್ದತೆಗಳನ್ನು ಮಾಡಿಕೊಳ್ಳಲಾಗುತ್ತಿದೆ.

ಈ ಸಂದರ್ಭದಲ್ಲಿ ಅಕಾಡೆಮಿಕ್ ಡೀನ್ ಡಾ. ರೇಣುಕಾಲತಾ, ಈ ಬಾರಿಯ ಕಲೋತ್ಸವ ಉಸ್ತುವಾರಿಗಳಾದ ಎಲೆಕ್ಟ್ರಿಕಲ್ ಅಂಡ್ ಎಲೆಕ್ಟ್ರಾನಿಕ್ ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥರಾದ ಡಾ.ಪ್ರದೀಪ್, ಹಾಗೂ ಎಲ್ಲಾ ವಿಭಾಗದ ಮುಖ್ಯಸ್ಥರು, ಪ್ರಾಧ್ಯಾಪಕರು, ವಿದ್ಯಾರ್ಥಿಗಳು ಹಾಜರಿದ್ದರು.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ
ಜಾಹೀರಾತಿಗಾಗಿ ಸಂಪರ್ಕಿಸಿ: 9901010109

"ವಚನ ವೈಭವ ನಾಟಕ ಪ್ರಯೋಗ"



ಮಹಾಮನೆಗೆ ಬರುವ ದಾರಿಯಲ್ಲಿ ಅಕ್ಕಮಹಾದೇವಿಯನ್ನು ಪರೀಕ್ಷಿಸಿದ ಕಿನ್ನರಿಬೊಮ್ಮಯ್ಯ ಹುಲಿ ನೆಕ್ಕಿ ಬದುಕಿದೆನು ಎಂದು ಹೇಳುವ ಮಾತು ಅಕ್ಕನ ಗುಣ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಂತಿದೆ. ನುಡಿದಂತೆ ನಡೆವ ನಡೆದಂತೆ ನುಡಿವ ಶರಣರಿಂದಲೇ ಹುಲಿ ಎಂದು ಕರೆಸಿಕೊಂಡ ಮಹಾಶರಣೆ. ವೈರಾಗ್ಯ ನಿಧಿ ಅಕ್ಕನ ಬಿಟ್ಟರೆ ಬೇರಾರೂ ಇಲ್ಲ. ಹಾಗೆಯೇ ಪ್ರಭುದೇವರ ವಚನದ ಒಂದು ಸಾಲಿನಲ್ಲಿ ಗುಹೇಶ್ವರ ಲಿಂಗದಲ್ಲಿ ಅವಧಾನ ತಪ್ಪಿ, ಮರಳಿ ಅರಸಿದಡುಂಟೆ, ಹುಡುಕಿದರೆ ಹೋದದ್ದು ಮತ್ತೆ ಸಿಗುವುದಿಲ್ಲ. ಜಾಗೃತರಾಗಿ ಎಚ್ಚರಿಕೆಯ ಹೆಜ್ಜೆಗಳನ್ನಿಟ್ಟರೆ ಯಶಸ್ಸು ಸಾಧ್ಯ. ಇಂತಹ ಶರಣರ ಆಶಯಗಳನ್ನು ನಾಟಕ ಮುಖೇನ ಜನರಿಗೆ ತಲುಪಿಸುವ ನಿಮ್ಮ ಕಾರ್ಯ ಯಶಸ್ವಿಯಾಗಲಿ ಎಂದು ಹಿರಿಯ ಸಾಹಿತಿ ಮುದ್ದೇನಹಳ್ಳಿ ನಂಜಯ್ಯನವರು ಹರಸಿದರು.

ಅವರು ದಿನಾಂಕ 15-03-2026ನೇ ಭಾನುವಾರ ಸಂಜೆ ಮೆಳೇಹಳ್ಳಿಯ ವಿ.ರಾಮಮೂರ್ತಿ ರಂಗಸ್ಥಳದಲ್ಲಿ ಡಮರುಗ ರಂಗಸಂಪನ್ಮೂಲ ಕೇಂದ್ರವು ಆಯೋಜಿಸಿದ್ದ ವಚನ ವೈಭವ ನಾಟಕ ವೀಕ್ಷಿಸಿ ಮಾತನಾಡಿದರು.

ಪ್ರೇಕಕ ಗಣ್ಯರಾಗಿ ಕರೀಕೆರೆ ಪಾಲಾಕ್ಷ, ಶಿಕ್ಷಕ ನಿಜಲಿಂಗಪ್ಪ, ಉಮೇಶ್ ಉಪಸ್ಥಿತರಿದ್ದರು. ದೇಸಿ ರಂಗನಿರ್ದೇಶಕ ಮೆಳೇಹಳ್ಳಿ ದೇವರಾಜ್ ನಿರ್ದೇಶನ ಹಾಗೂ ವಿದ್ವಾನ್ ಮುತ್ತುರಾಜ್ ಸಂಗೀತ ನಾಟಕಕ್ಕೆ ಪೂರಕವಾಗಿದ್ದವು. ರಂಗದಲ್ಲಿ ವಿಶ್ವನಾಥ್, ಶಿವಕುಮಾರ್, ರಾಜೇಶ್ವರಿ, ಮಂಗಳಾ, ಸುನೀತ, ಪ್ರಕಾಶ್, ಲಯ, ಚಿನ್ಮಯ, ಬಸವರಾಜ್, ಧೃವ, ಅನಿಲ್ ಲವಲವಿಕೆಯಿಂದ ಅಭಿನಯಿಸಿದರು. ಪ್ರಯೋಗವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಕಾರದಲ್ಲಿ ಆಯೋಜಿಸಲಾಗಿತ್ತು.

ಸಣ್ ಸುದ್ದಿ

ಗೃಹ ಬಳಕೆ ಅಡುಗೆ ಅನಿಲ ಸಮಸ್ಯೆ ಸಹಾಯವಾಣಿ ಸಂಖ್ಯೆಗೆ ಕರೆ ಮಾಡಲು ಮನವಿ

ತುಮಕೂರು: ಗೃಹ ಬಳಕೆ ಅಡುಗೆ ಅನಿಲ ಕುರಿತು ಸಾಮಾಜಿಕ ಜಾಲ ತಾಣಗಳಲ್ಲಿ ಹರಿದಾಡುತ್ತಿರುವ ವದಂತಿಗಳಿಗೆ ಸಾರ್ವಜನಿಕರು ಕಿವಿ ಕೊಡಬಾರದೆಂದು ತಿಳುವಳಿಕೆಗಾಗಿ ದೇಶಾದ್ಯಂತ ಐಕಲು ಉತ್ಪಾದನೆ ಮತ್ತು ಬಾಟಲಿಂಗ್ ಎರಡೂ ಹೆಚ್ಚಿರುವುದರಿಂದ ದೇಶಿಯ ಐಕಲುಯು ಕೊರತೆಯಿಲ್ಲ. ಗೃಹಬಳಕೆ ಆಡುಗೆ ಅನಿಲ(ಸಿಲಿಂಡರ್‌ಗಳು) ಸಾಕಷ್ಟು ಪ್ರಮಾಣದಲ್ಲಿ ದಾಸ್ತಾನು ಲಭ್ಯವಿರುವುದರಿಂದ ಗ್ರಾಹಕರು ಗಾಬರಿಗೊಳ್ಳಬಾರದೆಂದು ಹಾಗೂ ಹೆಚ್ಚುವರಿಯಾಗಿ ದಾಸ್ತಾನು ಮಾಡಿಕೊಳ್ಳಬಾರದೆಂದು ತುಮಕೂರು ತಾಲ್ಲೂಕು ತಹಶೀಲ್ದಾರ್ ಮನವಿ ಮಾಡಿದ್ದಾರೆ.

ಹೆಚ್ಚಿನ ಗ್ರಾಹಕರು, ಮುಂಚಿತವಾಗಿ ಬುಕ್ಕಿಂಗ್ ಮಾಡುತ್ತಿರುವುದರಿಂದ **IVRS/Missed Call** ಮಾಡುವ ವ್ಯವಸ್ಥೆಯಲ್ಲಿ ಹೆಚ್ಚಿನ ಸಂಚಾರ ದಟ್ಟಣೆ ಉಂಟಾಗಿ ಸದರಿ ಸಿಸ್ಟಂಗಳು ಕಾರ್ಯನಿರ್ವಹಿಸುತ್ತಿಲ್ಲವಾದ್ದರಿಂದ ಪರ್ಯಾಯವಾಗಿ ಖಔಅಐ, ಊಕಅಐ ಹಾಗೂ ៖ಕಅಐ ಐಕಲು ತೈಲ ಕಂಪನಿಗಳು ಗ್ರಾಹಕರಿಗೆ **IVRS, Missed Call, Whatsapp, Mobile Application, OMC Portal** ಹಾಗೂ ಪಾವತಿ ಅಪ್ಲಿಕೇಶನ್(**Paytm/Phone pey**) ನಂತಹ 6 ಬುಕ್ಕಿಂಗ್ ವಿಧಾನಗಳನ್ನು ಕಲ್ಪಿಸಿದೆ. ಗ್ರಾಹಕರು ತಮ್ಮ ಅನುಕೂಲಕ್ಕೆ ಅನುಗುಣವಾಗಿ ಈ ವ್ಯವಸ್ಥೆಯನ್ನು ಬಳಸಲು ಸೂಚಿಸಲಾಗಿದೆ. ಪ್ರತಿ ಗ್ರಾಹಕರಿಗೆ ನಗರ ಪ್ರದೇಶದಲ್ಲಿ 25 ದಿನಗಳಿಗೊಮ್ಮೆ ಹಾಗೂ ಗ್ರಾಮಾಂತರ ಪ್ರದೇಶದಲ್ಲಿ 45 ದಿನಗಳಿಗೊಮ್ಮೆ ಸರ್ಕಾರದ ನಿಯಮದಂತೆ ಇಂಟರ್-ಬುಕ್ಕಿಂಗ್ ಅವಧಿಯನ್ನು ನಿಗಧಿಪಡಿಸಲಾಗಿದೆ. ತಾಲ್ಲೂಕಿನಲ್ಲಿ ಎಲ್.ಪಿ.ಜಿ. ಅನಿಲಗಳ ಕೊರತೆ ಇಲ್ಲದಿರುವುದರಿಂದ ಸಾರ್ವಜನಿಕರು ಭಯಪಡುವ ಅಗತ್ಯವಿಲ್ಲ. ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಸುಳ್ಳು ವದಂತಿಗಳಿಗೆ ಸಾರ್ವಜನಿಕರು ಕಿವಿ ಕೊಡಬಾರದು. ಒಂದು ವೇಳೆ ಸಮಸ್ಯೆ ಕಂಡು ಬಂದಲ್ಲಿ ಸಹಾಯವಾಣಿ ಸಂಖ್ಯೆ: 8553378925ಕ್ಕೆ ದೂರವಾಣಿ ಮೂಲಕ ಕರೆ ಮಾಡಬಹುದಾಗಿದೆ ಎಂದು ಅವರು ತಿಳಿಸಿದ್ದಾರೆ.

ಚಲನಚಿತ್ರಗಳಲ್ಲಿ ಮಿತಿಮೀರುತ್ತಿರುವ ಅಶ್ಲೀಲತೆ-ಹಿಂಸೆ

ವಿಷಯ: ಚಲನಚಿತ್ರಗಳಲ್ಲಿ ಮಿತಿಮೀರುತ್ತಿರುವ ಅಶ್ಲೀಲತೆ-ಹಿಂಸೆ ಹಾಗೂ ಸೆನ್ಸಾರ್ ಮಂಡಳಿಯ ಬೇಜವಾಬ್ದಾರಿತನವನ್ನು ಖಂಡಿಸಿ ಂಖಆಖಔಜಿಲ್ಲಾ ಸಮಿತಿಯ ಪತ್ರಿಕಾ ಹೇಳಿಕೆ

ಇತ್ತೀಚಿನ ದಿನಗಳಲ್ಲಿ ಕನ್ನಡಚಿತ್ರರಂಗದಲ್ಲಿ ಸಾಂಸ್ಕೃತಿಕಅವನತಿಎದ್ದುಕಾಣುತ್ತಿದ್ದು, ಅದರಲ್ಲೂ ವಿಶೇಷವಾಗಿ 'ಕೆ.ಡಿ.'(**KD: The Devil**) ಚಿತ್ರದ ಅಶ್ಲೀಲ ಸಾಹಿತ್ಯದ ಹಾಡು ಹಾಗೂ 'ಟಾಕ್ಸಿಕ್' (ಖಿಂಥುಛಿ) ಚಿತ್ರದಟೀಸರ್‌ನಲ್ಲಿ ಪ್ರದರ್ಶಿತವಾಗಿರುವ ಅಶ್ಲೀಲತೆ ಮತ್ತು ಹಿಂಸೆಯಅಬ್ಬರವು ವಿದ್ಯಾರ್ಥಿ ಸಮುದಾಯ ಹಾಗೂ ಸಮಾಜದ ಮೇಲೆ ಅತ್ಯಂತಗಂಭೀರವಾದದುಷ್ಪರಿಣಾಮ ಬೀರುತ್ತಿದೆ ಎಂದು ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ಸ್‌ಆರ್ಗನೈಸೇಶನ್(ಂಖಆಖಔ)ತುಮಕೂರುಜಿಲ್ಲಾ ಸಮಿತಿಯುತೀವ್ರಆತಂಕ ವ್ಯಕ್ತಪಡಿಸುತ್ತದೆ.

ವ್ಯವಸ್ಥೆಯ ಲೋಪದೋಷಗಳನ್ನು ಪ್ರಶ್ನಿಸುವ ಅಥವಾಜನಪರ ಆಶಯಗಳನ್ನು ಹೊಂದಿರುವ ಚಿತ್ರಗಳ ಮೇಲೆ ಸಣ್ಣ ಕಾರಣಗಳಿಗಾಗಿ ಕತ್ತರಿ ಪ್ರಯೋಗಿಸುವ ಪ್ರಾದೇಶಿಕ ಸೆನ್ಸಾರ್ ಮಂಡಳಿಯು, ಇಂತಹ ಕೆಳಮಟ್ಟದ ಸಾಹಿತ್ಯ ಮತ್ತು ಮಿತಿಮೀರಿದರಕ್ತಪಾತದ ದೃಶ್ಯಗಳಿಗೆ ಅನುಮತಿ ನೀಡುತ್ತಿರುವುದುಅದರದ್ವಂದ್ವ ನೀತಿಯನ್ನುಎತ್ತಿತೋರಿಸುತ್ತದೆ.ಸಮಾಜವನ್ನು ಸುಧಾರಿಸಬೇಕಾದ ಮಾಧ್ಯಮಗಳು ಕೇವಲ ವ್ಯಾಪಾರೀಕರಣದ ಬೆನ್ನತ್ತಿ, ಮಹಿಳೆಯರನ್ನು ಕೇವಲ ಭೋಗದ ವಸ್ತುವಾಗಿ ಬಿಂಬಿಸುವ ಅಶ್ಲೀಲ ಹಾಡುಗಳನ್ನು ಹಾಗೂ ಹಿಂಸೆಯನ್ನು ವೈಭವೀಕರಿಸುವ ದೃಶ್ಯಗಳನ್ನು ಸಾರ್ವಜನಿಕವಾಗಿ ಬಿತ್ತರಿಸುತ್ತಿವೆ.

ಸಿನಿಮಾಗಳಲ್ಲಿ ತೋರಿಸಲಾಗುವಇಂತಹ ಪ್ರಚೋದನಾಕಾರಿ ದೃಶ್ಯಗಳಿಂದಾಗಿ ಇಂದಿನ ಎಳೆಯ ಮನಸ್ಸುಗಳು ದಾರಿತಪ್ಪುತ್ತಿವೆ. ಇತ್ತೀಚೆಗೆ ಬಳ್ಳಾರಿಯ ಹಾಸ್ಟೆಲ್‌ನಲ್ಲಿ ನಡೆದ ವಿದ್ಯಾರ್ಥಿಯ ಕೊಲೆ ಪ್ರಕರಣ ಹಾಗೂ ಶಾಲಾ ಮಕ್ಕಳು ಗಂಭೀರಅಪರಾಧ ಕೃತ್ಯಗಳಲ್ಲಿ ತೊಡಗಿಸಿಕೊಳ್ಳುತ್ತಿರುವುದು ಸಿನಿಮಾ ಪ್ರೇರಿತ ವಿಕೃತ ಸಂಸ್ಕೃತಿಯ ಫಲಿತಾಂಶವೇಆಗಿದೆ. ವಿದ್ಯಾರ್ಥಿಗಳಲ್ಲಿ ನೈತಿಕತೆ ಮತ್ತು ಮಾನವೀಯ ಮೌಲ್ಯಗಳನ್ನು ಬೆಳೆಸುವ ಬದಲಿಗೆ, ಇಂದಿನ ಸಿನಿಮಾಗಳು ಅವರಲ್ಲಿಕ್ರೌರ್ಯ ಮತ್ತು ಲೈಂಗಿಕ ವಿಕೃತಿಯನ್ನು ಬಿತ್ತುತ್ತಿವೆ. ಈ ಎಲ್ಲಾ ಬೆಳವಣಿಗೆಗಳಿಗೆ ಸೆನ್ಸಾರ್ ಮಂಡಳಿಯ ಬೇಜವಾಬ್ದಾರಿತನ ಸಹ ಒಂದುಕಾರಣವಾಗಿದೆ.

ಆದುದರಿಂದ, ಂಖಆಖಔಜಿಲ್ಲಾ ಸಮಿತಿಯು ಸೆನ್ಸಾರ್ ಮಂಡಳಿಯನ್ನುತೀವ್ರವಾಗಿಖಂಡಿಸುತ್ತದೆಮತ್ತುಸರ್ಕಾರವುಕೂಡಲೇ ಮಧ್ಯಪ್ರವೇಶಿಸಿ ಇಂತಹ ಅಶ್ಲೀಲ ಹಾಗೂ ಹಿಂಸಾತ್ಮಕ ಸಿನಿಮಾಗಳ ವಿರುದ್ಧಕಠಿಣಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸುತ್ತದೆ. ವಿದ್ಯಾರ್ಥಿ ಸಮುದಾಯವುಇಂತಹ ಸಂಸ್ಕೃತಿಹೀನ ಸಿನಿಮಾಗಳನ್ನು ತಿರಸ್ಕರಿಸುವ ಮೂಲಕ ಆರೋಗ್ಯವಂತ ಸಮಾಜ ನಿರ್ಮಾಣಕ್ಕೆ ಮುಂದಾಗಬೇಕೆಂದು ಈ ಮೂಲಕ ಕರೆ ನೀಡುತ್ತದೆ.

ಇಂದಿನಿಂದ ರಾಜ್ಯಾದ್ಯಂತ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಆರಂಭ.
ಂಃಗಿಕ ಸಂಘಟನೆಗಳಿಂದ ವಿದ್ಯಾರ್ಥಿಗಳಿಗೆ ಅಭಿನಂದನೆಗಳ ಮಹಾಪೂರ.
ಪರೀಕ್ಷೆ ಬರೆಯಲಿರುವ ವಿದ್ಯಾರ್ಥಿಗಳಿಗೆ ಎಬಿವಿಪಿ ಸಂಘಟನೆಯಿಂದ ವಿಶೇಷ ಶುಭಾಷಯ.
ವಿದ್ಯಾರ್ಥಿಗಳಿಗೆ ಸಿಹಿ ಹಂಚಿ, ಧೈರ್ಯ ತುಂಬಿದ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಕಾರ್ಯಕರ್ತರು.
ಪರೀಕ್ಷಾ ಕೇಂದ್ರಗಳ ಮುಂದೆ ವಿದ್ಯಾರ್ಥಿಗಳಿಗೆ ಸಿಹಿ ನೀಡಿ ಶುಭ ಕೋರಿದ ಎಬಿವಿಪಿ ಪದಾಧಿಕಾರಿಗಳು.
ತುಮಕೂರು ಜಿಲ್ಲೆಗೆ ಈ ಬಾರಿ ಉತ್ತಮ ಫಲಿತಾಂಶ ತರುವಂತೆ ವಿದ್ಯಾರ್ಥಿಗಳಲ್ಲಿ ಮನವಿ.
ಪರೀಕ್ಷಾ ಆತಂಕ ದೂರಮಾಡಿ, ಆತ್ಮವಿಶ್ವಾಸದಿಂದ ಪರೀಕ್ಷೆ ಎದುರಿಸಲು ವಿದ್ಯಾರ್ಥಿಗಳಿಗೆ ಧೈರ್ಯ ತುಂಬಿದ ಸಂಘಟನೆ.

ಅಪ್ಪು ಹುಟ್ಟುಹಬ್ಬಆಚರಣೆ: ಪೌರಕಾರ್ಮಿಕರಿಗೆಗೌರವಾರ್ಪಣೆ



ತುಮಕೂರು: ನಗರದ ಸ್ವಚ್ಛತೆಗೆ, ನಾಗರೀಕರಆರೋಗ್ಯಕಾಪಾಡುವಲ್ಲಿ ಪೌರಕಾರ್ಮಿಕರ ಸೇವೆ ಮಹತ್ವವಾದದ್ದು, ಪೌರಕಾರ್ಮಿಕರುಕಾರ್ಯನಿರ್ವಹಿಸದಿದ್ದರೆಊರು ಕೊಳೆತು ನಾರುತ್ತಿತು.ಊರಿನ ಸೌಂದರ್ಯಕ್ಕೆ, ನೈರ್ಮಲ್ಯತೆಗೆಕಾರಣವಾಗಿರುವ ಪೌರಕಾರ್ಮಿಕರ ಸೇವೆ ಶ್ಲಾಘನೀಯಎಂದುಮಾನವ ಬಂಧುತ್ವ ವೇದಿಕೆ ಜಿಲ್ಲಾ ಸಂಚಾಲಕ ಪ್ರತಾಪ್ ಮದಕರಿ ಹೇಳಿದರು.

ನಗರದಡಾ.ಪುನೀತ್‌ರಾಜ್‌ಕುಮಾರ್ ಬಡಾವಣೆ ನಾಗರಿಕ ಹಿತರಕ್ಷಣಾ ಸಮಿತಿ ಹಾಗೂ ಮಾನವ ಬಂಧುತ್ವ ವೇದಿಕೆ ನಗರ ಸಂಚಾಲನ ಸಮಿತಿ ಹಮ್ಮಿಕೊಂಡಿದ್ದಕರ್ನಾಟಕರತ್ನಡಾ.ಪುನೀತ್‌ರಾಜ ್ಕುಮಾರ್‌ಜನ್ಮದಿನ ಆಚರಣೆ ಅಂಗವಾಗಿ ಹಮ್ಮಿಕೊಂಡಿದ್ದಕಾರ್ಯಕ್ರಮದಲ್ಲಿಅನ್ನಸಂತರ್ಪಣೆ ವಿತರಿಸಿ, ಪೌರಕಾರ್ಮಿಕರನ್ನುಸನ್ಮಾನಿಸಿ ಗೌರವಿಸಿ ಮಾತನಾಡಿದರು.

ನಮ್ಮ ಸುತ್ತಮುತ್ತಲ ಪರಿಸರ ಸ್ವಚ್ಛವಾಗಿಲ್ಲದಿದ್ದರೆ ಅನೇಕ ರೋಗಗಳು ಹರಡಿ ನಾವೆಲ್ಲಾಅನಾರೋಗ್ಯಕ್ಕೆತುತ್ತಾಗಬೇಕಾಗಿತ್ತು.ಸಾವುನೋವಿಗೂ ಕಾರಣವಾಗುತ್ತಿತ್ತು. ಆದರೆಇದಕ್ಕೆಅವಕಾಶವಾಗದಂತೆ ಪೌರಕಾರ್ಮಿಕರು ಸ್ವಚ್ಛತಾಕಾರ್ಯ ನಿರ್ವಹಿಸಿ ಆರೋಗ್ಯವಂತ ಪರಿಸರನಿರ್ಮಾಣಮಾಡುತ್ತಿದ್ದಾರೆ.ಇಂತಹಪೌರಕಾರ್ಮಿಕರನ್ನುನಾವೆಲ್ಲರೂಗೌರವದಿಂದಕಾಣಬೇಕು, ಅವರ ಸೇವಾಕಾರ್ಯದಲ್ಲಿ ಸ್ಪಂದಿಸಬೇಕು ಎಂದು ಹೇಳಿದರು.

ಪೌರಕಾರ್ಮಿಕರು ನಿಮ್ಮ ಮನೆ ಸುತ್ತಮುತ್ತಲಿನ ಜಾಗ ಸ್ವಚ್ಛ ಮಾಡಲು ಬಂದಾಗಅವನ್ನು ಪ್ರೀತಿಯಿಂದ ಮಾತನಾಡಿಸಿ,ಅವರ ಕೆಲಸಕ್ಕೆ ಗೌರವಕೊಟ್ಟರೆಅವರೂಅಭಿಮಾನದಿಂದತಮ್ಮ ಕೆಲಸ ಮಾಡಲು ಹುಮ್ಮಸ್ಸು ಬರುತ್ತದೆಎಂದರು.

ಡಾ.ಪುನೀತ್‌ರಾಜ್‌ಕುಮಾರ್‌ಅವರುಕೇವಲ ಕಲಾವಿದರಾಗಿ ಮಾತ್ರವಲ್ಲ, ಸಮಾಜವನ್ನು ಪ್ರೀತಿಸುವ ಸಜ್ಜನ ವ್ಯಕ್ತಿಯಾಗಿಎಲ್ಲರ ಪ್ರೀತಿ,ಅಭಿಮಾನ ಗಳಿಸಿದ್ದರು. ಇಂತಹಅಪ್ಪುಚಿಕ್ಕ ವಯಸ್ಸಿಗೇ ನಮ್ಮನ್ನು ಬಿಟ್ಟುಅಗಲಿದರು.ಅವರು ಮಾಡಿರುವ ಸೇವಾ ಕಾರ್ಯಅವರನ್ನು ಸದಾ ಜೀವಂತವಾಗಿರಿಸಿದೆ.ಅಪ್ಪುಅಂತಹವರುಅಜರಾಮರ.ಅವರ ಆದರ್ಶಗಳನ್ನು ಎಲ್ಲರೂತಮ್ಮ ಬದುಕಿನಲ್ಲಿ ಅಳವಡಿಸಿಕೊಂಡರೆ ನಾವು ಅವರಿಗೆ ಸಲ್ಲಿಸುವಗೌರವವಾಗಿದೆಎಂದು ಪ್ರತಾಪ್ ಮದಕರಿ ಹೇಳಿದರು.

ಡಾ.ಪುನೀತ್‌ರಾಜ್‌ಕುಮಾರ್ ಹೆಸರಿನ ಈ ಬಡಾವಣೆಯ ಒಳಚರಂಡಿ ಉಕ್ಕಿ ರಸ್ತೆ ಮೇಲೆ ಕೊಳಚೆ ಹರಿಯುತ್ತಿದೆ. ಇಲ್ಲಿಕುಡಿಯುವ ನೀರಿನ ಸಮಸ್ಯೆಯೂಇದೆ.ಈ ಬಗ್ಗೆ ಹಲವು ಬಾರಿ ಅಧಿಕಾರಿಗಳ ಗಮನಕ್ಕೆ ತಂದರೂಅವರು ಸಮಸ್ಯೆ ಬಗೆಹರಿಸಿಲ್ಲ, ಅಧಿಕಾರಿಗಳು ಇನ್ನಾದರೂಎಚ್ಚೆತ್ತುಕೊಂಡು ಸಮಸ್ಯೆ ನಿವಾರಣೆ ಮಾಡದಿದ್ದರೆ ನಾಗರೀಕರು ಪ್ರತಿಭಟನೆ ನಡೆಸಬೇಕಾಗುತ್ತದೆಎಂದುಎಚ್ಚರಿಕೆ ನೀಡಿದರು.

ನಾಗರಿಕ ಹಿತರಕ್ಷಣಾ ಸಮಿತಿಕಾರ್ಯದರ್ಶಿ ಸಂಪತ್‌ಕುಮಾರ್, ಸಹ ಕಾರ್ಯದರ್ಶಿ ಮಂಜುನಾಥ್, ನಿರ್ದೇಶಕರಾದಗುರುರಾಜ್ ಟಿ, ಲೋಕೇಶ್, ಲಕ್ಷ್ಮೀಕಾಂತ್, ವೆಂಕಟೇಶ್, ವಕೀಲರಾದಗಂಗಣ್ಣ, ಪ್ರದೀಪ್,ರಿಜಿಸ್ಟ್ರಾರ್ ಇಲಾಖೆ ನಿವೃತ್ತ ನೌಕರ ವಿಜಯ್‌ಕುಮಾರ್, ನಂದಿನಿ, ಮಾನವ ಬಂಧುತ್ವ ವೇದಿಕೆಯ ನಗರ ಸಂಚಾಲಕ ಎಚ್.ಸಾಗರ್,ಜಿಲ್ಲಾ ಸಹ ಸಂಚಾಲಕ ಅಭೀಶಕ್‌ಯಾದವ್ ಮೊದಲಾದವರು ಭಾಗವಹಿಸಿದ್ದರು.



ಯುಗ ಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ

ಯುಗ ಯುಗಾದಿ ಕಳೆದರೂ
ಯುಗಾದಿ ಮರಳಿ ಬರುತಿದೆ
ಹೊಸ ವರುಷಕೆ ಹೊಸ ಹರುಷವ
ಹೊಸತು ಹೊಸತು ತರುತಿದೆ.

ಹೊಂಗೆಹೂವ ತೊಂಗಲಲ್ಲಿ
ಭೃಂಗದ ಸಂಗೀತಕೇಳಿ
ಮತ್ತೆ ಕೇಳಿಬರುತಿದೆ.
ಬೇವಿನ ಕಹಿ ಬಾಳಿನಲ್ಲಿ
ಹೂವಿನ ನಸುಗಂಪು ಸೂಸಿ
ಜೀವಕಳೆಯ ತರುತಿದೆ.
ಕಮ್ಮನೆ ಬಾಣಕ್ಕೆ ಸೋತು

ಜುಮ್ಮನೆ ಮಾಮರವು ಹೂತು
ಕಾಮಗಾಗಿ ಕಾದಿದೆ.
ಸುಗ್ಗಿ ಸುಗ್ಗಿ ಸುಗ್ಗಿ ಎಂದು
ಹಿಗ್ಗಿ ಗಿಳಿಯ ಸಾಲು ಸಾಲು
ತೋರಣದೊಲು ಕೋದಿದೆ.

ಸುನಿಲ್ ಚಾರಿಟಬಲ್ ಟ್ರಸ್ಟ್ ಹಾಗೂ ಕಲ್ಪಜ್ಯೋತಿ ಟ್ರಸ್ಟ್ ಸಹಯೋಗದಲ್ಲಿ ನಡೆದ ಆರೋಗ್ಯ ತಪಾಸಣಾ ಹಾಗೂ ರಕ್ತದಾನ ಶಿಬಿರ ಯಶಸ್ವಿ.

ತುರುವೇಕೆರೆ:- ತುರುವೇಕೆರೆ ತಾಲ್ಲೂಕಿನ ದಂಡಿನಶಿವರದಲ್ಲಿ ಯುವ ಮುಖಂಡ ಚಿಮ್ಮನಹಳ್ಳಿ ಸುನಿಲ್ ಹುಟ್ಟುಹಬ್ಬದ ಅಂಗವಾಗಿ ಆಯೋಜಿಸಿದ್ದ ಬೃಹತ್ ಆರೋಗ್ಯ ತಪಾಸಣಾ ಶಿಬಿರ ಅದ್ಧೂರಿಯಾಗಿ ನರವೇರಿತು.

ಕಾರ್ಯಕ್ರಮಕ್ಕೆ ದೀಪ ಬೆಳಗುವ ಮೂಲಕ ಶಾಸಕ ಎಂ.ಟಿ.ಕೃಷ್ಣಪ್ಪ ಚಾಲನೆ ನೀಡಿ ಮಾತನಾಡಿ ಗ್ರಾಮೀಣ ಬಾಗದಲ್ಲಿ ಆರೋಗ್ಯ ತಪಾಸಣಾ ಶಿಬಿರಗಳನ್ನು ಆಯೋಜಿಸುವ ಮೂಲಕ ಸಾಮಾನ್ಯ ಜನರಿಗೆ ಆರೋಗ್ಯದ ಬಗೆಗೆ ಅರಿವು ಮೂಡಿಸುವ ಉತ್ತಮ ಕಾರ್ಯ ಮಾಡುತ್ತಿರುವ ಸುನಿಲ್‌ರವರಿಗೆ ಒಳ್ಳೆಯದಾಗಲಿ ಇಂತಹ ಕಾರ್ಯಕ್ರಮಗಳು ಅವರ ಟ್ರಸ್ಟ್ ಮೂಲಕ ಮುಂದಿನ ದಿನಗಳಲ್ಲಿ ಹೆಚ್ಚಿನದಾಗಿ ನಡೆಯಲಿ ಎಂದರು.

ಆರೋಗ್ಯ ಶಿಬಿರದಲ್ಲಿನ ಮಳಿಗೆಯ ಟೇಪ್ ಕತ್ತರಿಸುವ ಮೂಲಕ ಉದ್ಘಾಟಿಸಿ ಮಾತನಾಡಿದ ತುಮುಲ್ ಮಹಾಲಿಂಗಪ್ಪ ಜನರಿಗೆ ಐಶ್ವರ್ಯ, ಅಧಿಕಾರದ ಜೊತೆಗೆ ಆರೋಗ್ಯ ಬಹಳ ಮುಖ್ಯ ಅದರಲ್ಲೂ ಆರೋಗ್ಯದ ಅರಿವು ಪೂರ್ವಭಾವಿಯಾಗಿ ಜನರಿಗೆ ತಿಳಿಯಬೇಕೆಂದರೆ ಗ್ರಾಮೀಣ ಭಾಗದಲ್ಲಿ ಇಂತಹ ಕಾರ್ಯಕ್ರಮಗಳು ಹೆಚ್ಚು ಹೆಚ್ಚು ನಡೆದಾಗ ಮಾತ್ರ ಇತ್ತೀಚಿನ ಒತ್ತಡದ ದಿನಗಳಲ್ಲಿನ ಕಾಯಿಲೆಗಳಿಂದ ಪಾರಾಗಲು ಸಾಧ್ಯ ಎಂದರು.

ಆರೋಗ್ಯ ಶಿಬಿರದಲ್ಲಿ ಗರ್ಭಿಣಿಯರಿಗೆ ಮಡಿಲು ತುಂಬಿ ಮಾತನಾಡಿದ ತುಮಕೂರು ಮಹಿಳಾ ಕಾಂಗ್ರೆಸ್ ಜಿಲ್ಲಾ ಅಧ್ಯಕ್ಷರಾದ ಗೀತಾ ರಾಜಣ್ಣ, ಚಿಮ್ಮನಹಳ್ಳಿ ಸುನಿಲ್ ರವರು ತಮ್ಮ ಹುಟ್ಟು ಹಬ್ಬವನ್ನು ಆರೋಗ್ಯ ಶಿಬಿರ ಏರ್ಪಡಿಸಿ ಮಾಡಿಕೊಳ್ಳುತ್ತಿರುವುದು ಅವರ ಸಾಮಾಜಿಕ ಸೇವಾಕಾರ್ಯವನ್ನು ತೋರುತ್ತದೆ ಅವರ



ಸೇವೆ ಸಮಾಜಕ್ಕೆ ಹೆಚ್ಚಿನದಾಗಿ ತಲುಪಲಿ ಪ್ರತಿ ಗ್ರಾಮಕ್ಕೂ ಇವರ ಸೇವಾ ಕಾರ್ಯಗಳು ಅವರ ಟ್ರಸ್ಟ್ ಮೂಲಕ ನೆರವೇರಲಿ ಅವರಿಗೆ ಭಗವಂತ ಮುಂದಿನ ದಿನಗಳಲ್ಲಿ ಉನ್ನತ ಅಧಿಕಾರ ನೀಡಲಿ ಎಂದು ಆಶಿಸಿದರು.

ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಮುಖಂಡ ಬಿ.ಎಸ್.ವಸಂತಕುಮಾರ್ ಮಾತನಾಡಿ ಸಮಾಜದ ಏಳಿಗೆಗೆ ಪ್ರತಿಯೊಬ್ಬರೂ ಒಂದಿಲ್ಲೊಂದು ಕೊಡುಗೆ ನೀಡುವುದು ನಮ್ಮಗಳ ಕರ್ತವ್ಯ ಸುನಿಲ್ ಸೇವಾಕಾರ್ಯ ಇತರ ಯುವಕರಿಗೂ ಮಾದರಿಯಾಗಲಿ ಎಂದರು.

ಕಾರ್ಯಕ್ರಮಕ್ಕೆ ಆಗಮಿಸಿದ ಎ.ಐ.ಸಿ.ಸಿ.ಸದಸ್ಯ ಹಾಗೂ ಕಾಂಗ್ರೆಸ್ ಮುಖಂಡ ಸುಬ್ರಹ್ಮಣ್ಯ ಶ್ರೀಕಂಠೇಗೌಡ ಮಾತನಾಡಿ ಸುನಿಲ್ ಹುಟ್ಟುಹಬ್ಬದಂದು ಕೇವಲ ಹಾರಾ ತುರಾಯಿಗೆ ಸೀಮಿತವಾಗದೆ ಸಮಾಜಮುಖಿಯಾಗಿ ಕೆಲಸ ಮಾಡುತ್ತಿದ್ದಾರೆ ಮುಂದಿನ ದಿನಗಳಲ್ಲಿ ಇಂತಹ ಕಾರ್ಯಕ್ರಮಗಳಿಗೆ ನನ್ನ ಸಹಕಾರ ಸದಾ ಇರುತ್ತದೆಂದು ತಿಳಿಸಿದರು. ತಿಪಟೂರಿನ ಶೇಖರ್ ಬ್ಲಡ್ ಬ್ಯಾಂಕ್ ಮೂಲಕ ರಕ್ತದಾನ ಶಿಬಿರ ನಡೆಯಿತು, ಇದಕ್ಕೆ ಸ್ವತಹ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಸುನಿಲ್‌ರವರೇ ರಕ್ತದಾನ ಮಾಡುವ ಮೂಲಕ ಚಾಲನೆ ನೀಡಿದರು.

ಆರೋಗ್ಯ ಶಿಬಿರದಲ್ಲಿ ಸಪ್ತಗಿರಿ ಆಪತ್ರೆ ವೈದ್ಯರು, ಶೇಖರ್ ಬ್ಲಡ್ ಬ್ಯಾಂಕ್‌ನ ಆದಂ ಹಾಗೂ ಸಿಬ್ಬಂದಿ, ಕಣ್ಣಿನ ತಜ್ಞರು, ಸಾಯಿಗಂಗಾ ಆಸ್ಪತ್ರೆ ವೈದ್ಯರಾದ ಡಾ:ರಾಘವೇಂದ್ರ ಸೇರಿದಂತೆ ಇತರರು ಆರೋಗ್ಯ ತಪಾಸಣೆ ನೆರವೇರಿಸಿದರು.

ಆರೋಗ್ಯತಪಾಸಣಾ ಶಿಬಿರದಲ್ಲಿ ಮಾಜಿ ಶಾಸಕ ಹೆಚ್.ಬಿ.ನಂಜೇಗೌಡ, ಮುಖಂಡರಾದ ಗುಡ್ಡೇನಹಳ್ಳಿ ಪ್ರಸನ್ನಕುಮಾರ್, ಅಮ್ಮಸಂದ್ರ ಸಿದ್ದಗಂಗಣ್ಣ, ದಂಡಿನಶಿವರ ರಾಜಕುಮಾರ್, ಶಂಕರೇಗೌಡ, ಜಕ್ಕನಹಳ್ಳಿ ಬಾಬಣ್ಣ, ಸುನಿಲ್ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಸುನಿಲ್, ಸುನಿಲ್‌ರವರ ತಂದೆಯವರಾದ ತಿಮ್ಮೇಗೌಡ, ಸಂಪಾದಕರಾದ ಬೊಮ್ಮೇನಹಳ್ಳಿ ನಂದೀಶ್, ಮೇಲನಹಳ್ಳಿ ಮಂಜಣ್ಣ, ಪೃಥ್ವಿರಾಜ್ ಸೇರಿದಂತೆ ಇತರರು ಇದ್ದರು.

ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ಚಾಕೋಲೆಟ್ ಹಾಗೂ ಪೆನ್ ನೀಡಿ ಶುಭ ಕೋರಿದ ಶಾಸಕ ಸಿ.ಬಿ.ಸುರೇಶ್‌ಬಾಬು

ಚಿಕ್ಕನಾಯಕನಹಳ್ಳಿ:-ಪರೀಕ್ಷೆಯ ಭಯವನ್ನು ಬಿಟ್ಟು ಧೈರ್ಯದಿಂದ ಅಂತಕವನ್ನು ಬಿಟ್ಟು ಪರಿಕ್ಷೆಯನ್ನು ಬರೆಯುವ ಮೂಲಕ ಉತ್ತಮ ಅಂಕಗಳನ್ನು ಗಳಿಸಿ ಸಾಧನೆ ಮಾಡಿ ನಿಮ್ಮ ಪೋಷಕರಿಗೆ, ಶಿಕ್ಷಕರಿಗೆ ಒಳ್ಳೆಯಹೆಸರನ್ನು ತನ್ನಿ ಎಂದು ಶಾಸಕ ಸಿ.ಬಿ.ಸುರೇಶ್‌ಬಾಬು ಶುಭ ಕೋರಿದರು.

ಪಟ್ಟಣದ ಸರ್ಕಾರಿ ಪ್ರೌಢಶಾಲೆಯ ಆವರಣದಲ್ಲಿ ಇಂದಿನಿಂದ ಪ್ರಾರಂಭವಾದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯನ್ನು ಬರೆಯಲಿರುವ ವಿದ್ಯಾರ್ಥಿಗಳಿಗೆ ಚಾಕೋಲೆಟ್ ಹಾಗೂ ಪೆನ್‌ನ್ನು ನೀಡುವ ಮೂಲಕ ಶುಭ ಕೋರಿದ ಅವರು ಪರೀಕ್ಷೆ ಎಂಬ ಭಯವನ್ನು ಬಿಡಿ ಯಾವುದೇ ಅತಂಕವನ್ನು ಇಟ್ಟುಕೊಳ್ಳಬೇಡಿ ಹೆಚ್ಚು ಅಂಕಗಳನ್ನು ಗಳಿಸುವತ್ತ ನಿಮ್ಮ ಗಮನ ಇರಲಿ ನಿಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಿ ಎಂದ ಅವರು ತಾಲ್ಲೂಕಿನಲ್ಲಿ 11 ಪರೀಕ್ಷಾ ಕೇಂದ್ರಗಳಲ್ಲಿ ಒಟ್ಟು 2234 ವಿದ್ಯಾರ್ಥಿಗಳು ಪರೀಕ್ಷೆಯನ್ನು ಬರೆಯುತ್ತಿದ್ದು ಎಲ್ಲಾ ವಿದ್ಯಾರ್ಥಿಗಳು ಉತ್ತಮ ಅಂಕಗಳನ್ನು ಪಡೆಯುವ ಮೂಲಕ ತಾಲ್ಲೂಕಿಗೆ ಕೀರ್ತಿತರುವಂತೆ ಶುಭ ಹಾರೈಸಿದರು.



ತಹಸೀಲ್ದಾರ್ ಮಮತಾ ಎಂ ಮಾತನಾಡಿ ಎಲ್ಲಾ ವಿದ್ಯಾರ್ಥಿಗಳು ಉತ್ತಮ ರೀತಿಯಲ್ಲಿ ಪರೀಕ್ಷೆಯನ್ನು ಬರೆಯುವ ಮೂಲಕ ಹೆಚ್ಚು ಅಂಕಗಳನ್ನು ಪಡೆಯಿರಿ ಎಂದ ಅವರು ಜಿಲ್ಲಾಧಿಕಾರಿಗಳು ಹಾಗೂ ಈ ಕ್ಷೇತ್ರದ ಶಾಸಕರ ಸಹಕಾರದಿಂದ ಉತ್ತಮ ರೀತಿಯಲ್ಲಿ ಪರೀಕ್ಷಾ ಸಿದ್ದತೆಯನ್ನು ವಿದ್ಯಾರ್ಥಿಗಳಿಗೆ ಶಿಬಿರಗಳನ್ನು ಮಾಡುವ ಮೂಲಕ ಮಕ್ಕಳನ್ನು ಪರೀಕ್ಷೆಗೆ ಸಿದ್ಧರನ್ನಾಗಿಸಿದ್ದು ಈ ಬಾರಿಯು ಉತ್ತಮ ಪಲಿತಾಂಶದ ನಿರೀಕ್ಷೆ ಇದೆ ಎಂದರು.

ಈ ಸಂದರ್ಭದಲ್ಲಿ ಪಟ್ಟಣದ ಮೂರು ಪರೀಕ್ಷಾ ಕೇಂದ್ರಗಳಾದ ದೇಶಿಯ ವಿದ್ಯಾಪೀಠ ಪ್ರೌಢಶಾಲೆ, ಸರ್ಕಾರಿ ಸ್ವತಂತ್ರ ಪದವಿ ಪೂರ್ವ ಕಾಲೇಜು ಸರ್ಕಾರಿ ಪ್ರೌಢಶಾಲೆಯ ಕೇಂದ್ರಗಳಲ್ಲಿ ಮಕ್ಕಳನ್ನು ಬೇಟಿಯಾಗಿ ಶುಭಕೋರಿದರು.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ

EDITOR: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRINTED BY: T.S.KRISHNAMURTHY, ANJANADRI PRINTERS, 4th CROSS, VINAYAKA NAGARA, TUMAKURU-572101. KARNATAKA, PUBLISHED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA. OWNED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRNTED AT: ANJANADRI PRINTERS, 4th CROSS, VINAYAKA NAGARA, TUMAKURU-572101. KARNATAKA, PUBLISHED AT: TUMAKURU, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA. SUB EDITOR- A.S.BANUPRAKASH CONTACT : 9901010109 GMAIL: suryapragathi2021@gmail.com.